# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜನವರಿ 14, 2021

ಸಂಪುಟ : 47 ಸಂಚಿಕೆ : 255 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಏಳು ಶಾಸಕರಿಗೆ ಸಚಿವ ಸ್ಥಾನ

### ಮೂಲ ಬಿಜೆಪಿ ಶಾಸಕರ ಆಕ್ರೋಶದ ನಡುವೆ ಮಂತ್ರಿಮಂಡಲ ವಿಸ್ತರಣೆ

ಬೆಂಗಳೂರು, ಜ. 13- ಮೂಲ ಬಿಜೆಪಿ ಶಾಸಕರ ಆಕ್ರೋಶದ ನಡುವೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ತಮ್ಮ ಮಂತ್ರಿಮಂಡಲವನ್ನು ವಿಸ್ತರಿಸಿ, ಹೊಸದಾಗಿ ಏಳು ಮಂದಿಯನ್ನು ಸೇರ್ಪಡೆ ಮಾಡಿಕೊಂಡಿದ್ದಾರೆ.

ಸರ್ಕಾರ ರಚನೆಗೆ ಪ್ರಮುಖ ಕಾರಣರಾದ ಮೂವರು ಸೇರಿದಂತೆ ಪಕ್ಷದ ನಾಲ್ವರು ಹಿರಿಯ ಶಾಸಕರಿಗೆ ಮಂತ್ರಿಮಂಡಲದಲ್ಲಿ ಅವಕಾಶ ಮಾಡಿಕೊಡುವ ಮೂಲಕ ಸಂಪುಟ ಗಾತ್ರವನ್ನು 27 ರಿಂದ 33ಕ್ಕೆ ಹೆಚ್ಚಿಸಿದ್ದಾರೆ.

ಇದೇ ಸಂದರ್ಭದಲ್ಲಿ ಅಬಕಾರಿ ಸಚಿವ ಹೆಚ್. ನಾಗೇಶ್ ಅವರನ್ನು ಸಂಪುಟದಿಂದ ಕೈಬಿಟ್ಟು, ಅವರಿಂದ ತೆರವಾದ ಸ್ಥಾನವನ್ನು ಹಾಗೆಯೇ ಖಾಲಿ ಉಳಿಸಿಕೊಂಡಿದ್ದಾರೆ.

ಬಿಜೆಪಿ ಸರ್ಕಾರ ರಚನೆಗೆ ಕಾರಣಕರ್ತರಾ ದವರಿಗೆ ಅಧಿಕಾರ ಕಲ್ಪಿಸುವ ಉದ್ದೇಶದಿಂದಲೇ ಇಂದು ಮಂತ್ರಿ ಮಂಡಲ ವಿಸ್ತರಿಸಿದರೂ, ಮುಖ್ಯಮಂತ್ರಿಯವರ ಅಪೇಕ್ಷೆಯಂತೆ ಎಲ್ಲ ರಿಗೂ ಅಧಿಕಾರ ಕೊಡಿಸಲು ಸಾಧ್ಯವಾಗಿಲ್ಲ.

ರಾಜರಾಜೇಶ್ವರಿ ವಿಧಾನಸಭೆ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಆಯ್ಕೆಗೊಂಡ ಮುನಿರತ್ನ ನಾಯ್ಡು (4ನೇ ಪುಟಕ್ಕೆ)



**ಎಂಟನೇ ಬಾರಿಗೆ ವಿಧಾನಸಭೆ ಪ್ರವೇಶಿಸಿರುವ ಉಮೇಶ್ ಕತ್ತಿ (ಹುಕ್ಕೇರಿ-ಬೆಳಗಾವಿ) ಅರವಿಂದ ಲಿಂಬಾವಳಿ (ಬೆಂಗಳೂರು ನಗರ) ಎಂಟಿಬಿ ನಾಗರಾಜ್, ಮುರುಗೇಶ್ ನಿರಾಣಿ (ಬಾಗಲಕೋಟೆ) ಆರ್. ಶಂಕರ್, ಸಿ.ಪಿ. ಯೋಗೇಶ್ವರ್, ಎಸ್. ಅಂಗಾರ (ಸೂಳ್ಯ-ದಕ್ಷಿಣ ಕನ್ನಡ) ಹಾಗೂ ಸಂಪುಟ ದರ್ಜೆಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.**

**ನೂತನ ಸಚಿವರಿಗೆ ತಡರಾತ್ರಿ ನಂತರ ಮುಖ್ಯಮಂತ್ರಿಯವರು ಖಾತೆಗಳನ್ನು ಹಂಚಿಕೆ ಮಾಡುವ ಸಾಧ್ಯತೆ ಇದೆ.**

### ಅವಕಾಶ ವಂಚಿತರಿಂದ ಸಿಎಂ ಮೇಲೆ ಆಕ್ರೋಶ

**ಬೆಂಗಳೂರು, ಜ. 13- ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಸಂಪುಟ ವಿಸ್ತರಣೆ ಮಾಡಿದ ಬೆನ್ನಲ್ಲೇ ಪಕ್ಷದ ಶಾಸಕರು ನಾಯಕತ್ವದ ವಿರುದ್ಧವೇ ಅಪಸ್ವರ ಎತ್ತಿದ್ದಾರೆ. ಅದರಲ್ಲೂ ಕೆಲವರು ನಿಷ್ಠಾವಂತರನ್ನು ದೂರವಿಟ್ಟು, ಬ್ಲ್ಯಾಕ್‌ಮೇಲ್‌ಗಳಿಗೆ ಸಂಪುಟದಲ್ಲಿ ಮುಖ್ಯಮಂತ್ರಿಯವರು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಕಿಡಿಕಾರಿದ್ದಾರೆ. ವಿಧಾನಸಭೆ ಚುನಾವಣೆಗಳಲ್ಲಿ ಸೋತವರಿಗೆ ಮಂತ್ರಿಮಂಡಲದಲ್ಲಿ ಅವಕಾಶ ನೀಡಿ, ಪಕ್ಷದಲ್ಲಿ ನಾಲ್ಕು, ಐದು, ಆರು ಬಾರಿ ವಿಧಾನ ಸಭೆ ಪ್ರವೇಶಿಸಿದವರನ್ನು** **(4ನೇ ಪುಟಕ್ಕೆ)**

## ಆಸ್ತಿ ತೆರಿಗೆ ಹೆಚ್ಚಳ

### ಮಹಾನಗರ ಪಾಲಿಕೆ, ನಗರಸಭೆ, ಪಟ್ಟಣ ಪಂಚಾಯ್ತಿ ಪುರಸಭೆಯಲ್ಲಿ ಆಸ್ತಿ ತೆರಿಗೆ ಹೆಚ್ಚಿಸಲು ಸಂಪುಟ ಒಪ್ಪಿಗೆ

ಬೆಂಗಳೂರು, ಜ. 13- ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ ಉಳಿದ ಮಹಾನಗರ ಪಾಲಿಕೆಗಳು, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯ್ತಿಯಲ್ಲಿ ಶೇ.130ರವರೆಗೂ ಆಸ್ತಿ ತೆರಿಗೆ ಹೆಚ್ಚಳ ಮಾಡುವ ಮಹತ್ವದ ತೀರ್ಮಾನವನ್ನು ರಾಜ್ಯ ಸಚಿವ ಸಂಪುಟ ಇಂದಿಲ್ಲಿ ತೆಗೆದುಕೊಂಡಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಆಸ್ತಿ ತೆರಿಗೆ ಹೆಚ್ಚಳ ಸಂಬಂಧ ತಿದ್ದುಪಡಿ ತರಲಾಗುತ್ತಿದೆ. ಖಾಲಿ ನಿವೇಶನಗಳಿಗೂ ತೆರಿಗೆ ವಿಧಿಸಲಾಗುವುದು. ಆದರೆ, ಒಂದು ಸಾವಿರ ಚದರ ಅಡಿಗಿಂತ ಕಡಿಮೆ ಇರುವ ನಿವೇಶನಗಳಿಗೆ ತೆರಿಗೆಯಿಂದ ವಿನಾಯಿತಿ ಇದೆ ಎಂದು ಹೇಳಿದ್ದಾರೆ.

ಸಾವಿರ ಚದರಡಿಗಿಂತ ಹೆಚ್ಚಿರುವ ಖಾಲಿ ನಿವೇಶನಗಳ ಆಸ್ತಿ ತೆರಿಗೆಯ ದರವನ್ನು ಶೇ. 0.2 ಯಿಂದ ಶೇ. 0.5ಕ್ಕೆ ಹೆಚ್ಚಿಸಲಾಗುತ್ತದೆ. ಹಾಗೆಯೇ ಮನೆಗಳಿಗೆ ತೆರಿಗೆಯ ದರವನ್ನು ಶೇ. 1 ರಿಂದ 1.5




**ಖಾಲಿ ನಿವೇಶನಗಳಿಗೂ ತೆರಿಗೆ ಹೇರಿಕೆ**

ರಷ್ಟು ಹೆಚ್ಚಿಸಲು ಈ ಕಾಯ್ದೆಯಲ್ಲಿ ಅವಕಾಶ ಇದೆ ಎಂದರು.

ಈ ಮೊದಲು ಆಸ್ತಿ ತೆರಿಗೆ ಲೆಕ್ಕಾಚಾರ ಹಾಕುವಾಗ ಆ ಆಸ್ತಿಯ ಮಾರ್ಗಸೂಚಿಯ ಶೇ. 50 ರಷ್ಟು ಮೌಲ್ಯದ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು. ಈಗ ಈ ಪದ್ಧತಿಯನ್ನು ಕೈ ಬಿಟ್ಟು, ಶೇ. 25 ರಷ್ಟು ಮಾರುಕಟ್ಟೆ ದರದ ಮೇಲೆ ಆಸ್ತಿ ತೆರಿಗೆ ವಿಧಿಸಲು ಈ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಖಾಲಿ ನಿವೇಶನಗಳ ಮಾರುಕಟ್ಟೆ ದರದ ಶೇ. 25 ರಷ್ಟು ದರಕ್ಕೆ ಆಸ್ತಿ ತೆರಿಗೆ ವಿಧಿಸಲಾಗುತ್ತದೆ ಎಂದೂ ಅವರು ಹೇಳಿದರು.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮೈಸೂರು, ಬೆಳಗಾವಿ, ದಾವಣಗೆರೆ, ಮಂಗಳೂರು, ಹುಬ್ಬಳ್ಳಿ ಧಾರವಾಡ, ಬಳ್ಳಾರಿ, ಗುಲಬುರ್ಗ, ಶಿವಮೊಗ್ಗ, ತುಮಕೂರು, ಬಿಜಾಪುರ ನಗರ ಪಾಲಿಕೆಗಳು ಸೇರಿದಂತೆ, ಉಳಿದ ನಗರ ಸಭೆ ಮತ್ತು ಪುರಸಭೆಗಳಲ್ಲಿ ಆಸ್ತಿ ತೆರಿಗೆಯನ್ನು ಹೆಚ್ಚಳ ಮಾಡಬೇಕಾಗಿದೆ.

ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಬರುವ ಕೆಲವು ಕಟ್ಟಡಗಳನ್ನು ವಾಣಿಜ್ಯ ಕಟ್ಟಡಗಳಾಗಿ ಪರಿವರ್ತಿಸಿ, ಅವುಗಳು ಸೇರಿದಂತೆ ಶೇ 25 ರಷ್ಟು ತೆರಿಗೆ ಹೆಚ್ಚಳ ಮಾಡಲು ಸಂಪುಟ ಸಮ್ಮತಿಸಿದೆ ಎಂದರು.

ಇದಕ್ಕಾಗಿ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1776 ರ ಸೆಕ್ಷನ್ 108, 109 ಮತ್ತು 109ಎ ಕಾಯ್ದೆ 2020 ರಂತೆ ತಿದ್ದುಪಡಿ ತರುವ ಪ್ರಸ್ತಾವನೆಯನ್ನು ಬರುವ **(2ನೇ ಪುಟಕ್ಕೆ)**





## ಮಕರ ಸಂಕ್ರಾಂತಿ ಸಂಭ್ರಮಕ್ಕೆ ದೇವನಗರಿ ಸಜ್ಜು

ದಾವಣಗೆರೆ, ಜ.13- ಹೊಸ ಭರವಸೆಯ ಬೆಳಕಿನೊಂದಿಗೆ ಹೊಸ ವರ್ಷ ಸ್ವಾಗತಿಸಿದ ಜನತೆ ನಾಳೆ ಇದೀಗ ಗುರುವಾರ ಸಂಕ್ರಾಂತಿಯನ್ನು ಸಂಭ್ರಮದಿಂದ ಆಚರಿಸಲು ಸಿದ್ಧರಾಗುತ್ತಿದ್ದಾರೆ.

ಬುಧವಾರವೇ ಜನತೆ ನಗರದ ಮಾರುಕಟ್ಟೆಯಲ್ಲಿ ಎಳ್ಳು, ಬೆಲ್ಲ, ಹುರಿಗಡಲೆ, ಕಡಲೆ ಕಾಯಿ, ಕಬ್ಬಿನ ತುಂಡುಗಳು, ಹಣ್ಣುಗಳನ್ನು ಖರೀದಿಸುತ್ತಿದ್ದರು. ಮಂಡಿಪೇಟೆ, ಗಡಿಯಾರ ಕಂಬ, ಕೆ.ಆರ್. ಮಾರುಕಟ್ಟೆ ಬಳಿ ಸಕ್ಕರೆಗೊಂಬೆ, ಎಳ್ಳು-

**ಎಳ್ಳು-ಬೆಲ್ಲ, ಕಬ್ಬು ಸಕ್ಕರೆ ಗೊಂಬೆ ಖರೀದಿ**

ಬೆಲ್ಲದ ಖರೀದಿ ನಡೆಯಿತು.

ಸೂರ್ಯ ಧನಸ್ಸು ರಾಶಿಯಿಂದ ಮಕರ ರಾಶಿಗೆ ಸೇರುವ ಸಮಯವನ್ನು ಮಕರ ಸಂಕ್ರಾಂತಿ ಎನ್ನಲಾಗುತ್ತದೆ.

ಪ್ರತಿ ವರ್ಷ ಜನವರಿ 14 ಅಥವಾ 15ರಂದು ಮಕರ ರಾಶಿಗೆ ಪ್ರವೇಶ ಮಾಡುವ ಸೂರ್ಯ, ತನ್ನ ಪಥವನ್ನು ಉತ್ತರಾಭಿಮುಖವಾಗಿ ಬದಲಿಸುತ್ತಾನೆ. 6 ತಿಂಗಳು ಕಾಲ ಉತ್ತರಾಯಣ ನಂತರ ಅಂದರೆ ಜೂನ್ 15ರ ನಂತರ ದಕ್ಷಿಣಾಯನ ಪ್ರಾರಂಭ ಆಗುತ್ತದೆ.

ಪ್ರಾಚೀನ ಕಾಲದಿಂದಲೂ ಆಚರಣೆಯಂತೆ ನಾಳೆ ಜನತೆ ಮನೆಯಲ್ಲಿ ಎಳ್ಳು-ಬೆಲ್ಲವನ್ನು ತಯಾರಿಸಿ, ಸಂಬಂಧಿಗಳು, ಸ್ನೇಹಿತರಿಗೆ ಹಂಚುತ್ತಾರೆ. ಚಳಿಗಾಲದಲ್ಲಿ ಎಳ್ಳು ಸೇವನೆಯಿಂದ ದೇಹದ ಉಷ್ಣತೆ ಹೆಚ್ಚಾಗುತ್ತದೆ. ಚರ್ಮದ ಕಾಂತಿಯೂ ಹೆಚ್ಚುತ್ತದೆ ಎಂಬ ವೈಜ್ಞಾನಿಕ ಕಾರಣವೂ ಇದೆ.

**ಉದ್ಯಾನವನಗಳತ್ತ ಜನತೆ:** (4ನೇ ಪುಟಕ್ಕೆ)

## ಎಲ್ಲಾ ಜಿಲ್ಲೆಗಳಿಗೂ ಲಸಿಕೆ ಪೂರೈಕೆ

### ದಾವಣಗೆರೆ ಜಿಲ್ಲೆಗೆ 28,810 ಲಸಿಕೆ

ಬೆಂಗಳೂರು, ಜ. 13 - ರಾಜ್ಯಕ್ಕೆ ಮೊದಲ ಹಂತದಲ್ಲಿ ಬಂದಿರುವ ಕೊರೊನಾ ಲಸಿಕೆಯನ್ನು ಎಲ್ಲಾ ಜಿಲ್ಲೆಗಳಿಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಂಚಿಕೆ ಮಾಡಿದೆ.

ನಿನ್ನೆ 54 ಬಾಕ್ಸ್‌ಗಳಲ್ಲಿ 6.48 ಲಕ್ಷ ಡೋಸ್ ಕೊರೊನಾ ಲಸಿಕೆ ಬೆಂಗಳೂರಿಗೆ ಬಂದಿತ್ತು. ಇಂದು ಬೆಳಗಾವಿಗೆ 1.40 ಲಕ್ಷ ಡೋಸ್ ಸಂಜೆ ವೇಳೆಗೆ ತಲುಪಲಿದೆ.

ಮೊದಲ ಹಂತದಲ್ಲಿ ಕೊರೊನಾ ವಾರಿಯರ್ಸ್‌ಗೆ ಲಸಿಕೆ ನೀಡಲಾಗುತ್ತಿದೆ. ಜ.16ರಿಂದ ಲಸಿಕೆ ನೀಡಲು ಬೇಕಾದ ಎಲ್ಲ ಸಿದ್ಧತೆಗಳನ್ನು ಆರೋಗ್ಯ ಇಲಾಖೆ ಮಾಡಿಕೊಂಡಿದೆ.

ಈಗಾಗಲೇ ಲಸಿಕೆ ನೀಡಿಕೆ ಪೂರ್ವಭಾವಿಯಾಗಿ ಎಲ್ಲ ಜಿಲ್ಲೆಗಳಲ್ಲೂ ಲಸಿಕೆ ವಿತರಿಸುವ ತಾಲೀಮನ್ನು ನಡೆಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿ ಪ್ರಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಲಸಿಕೆಯನ್ನು ಒಟ್ಟುಗೂಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ 15730, ರಾಜ್ಯ ಸರ್ಕಾರದಿಂದ 7,75,400 ಸೇರಿದಂತೆ ಒಟ್ಟು 7,93,710 ಲಸಿಕೆಗಳನ್ನು ಹಂಚಿಕೆ ಮಾಡಲಾಗಿದೆ.

ಬೆಂಗಳೂರು ವಿಭಾಗಕ್ಕೆ ಒಟ್ಟು 6, 46,960 ಹಾಗೂ ಬೆಳಗಾವಿ ವಿಭಾಗಕ್ಕೆ 1,46,750 ಲಸಿಕೆಗಳನ್ನು ಹಂಚಿಕೆ ಮಾಡಲಾಗಿದೆ. ಬೆಂಗಳೂರು ನಗರ **(4ನೇ ಪುಟಕ್ಕೆ)**

## ರಸ್ತೆ ಮಧ್ಯೆ ಒಕ್ಕಲು ಮಾಡುವ ರೈತರ ಚಳಿ ಬಿಡಿಸಿದ ನ್ಯಾಯಾಧೀಶರು



ಹರಪನಹಳ್ಳಿ, ಜ.13- ರಸ್ತೆಯನ್ನು ಕಣ ಮಾಡಿಕೊಂಡು ಒಕ್ಕುತ್ತಿರುವ ರೈತರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಧಾನ್ಯಗಳೊಂದಿಗೆ ವಿಷ ಪೂರಿತ ರಾಸಾಯನಿಕ ಮಿಶ್ರಣವಾಗಿ ಆರೋಗ್ಯ ಸಮಸ್ಯೆ ಉಂಟಾಗುತ್ತದೆ ಎಂಬ ನಿಟ್ಟಿನಲ್ಲಿ ರೈತರಲ್ಲಿ ಜಾಗೃತಿ ಮೂಡಿಸಲು ನ್ಯಾಯಾಧೀಶರಾದ ಮಂಜುಳಾ ಶಿವಪ್ಪ ಉಂಡಿ ರಸ್ತೆಗಿಳಿದು ಎಚ್ಚರಿಕೆ ನೀಡಿದ ಘಟನೆ ಜರುಗಿದೆ.


ನ್ಯಾಯಾಧೀಶರು ತಾಲ್ಲೂಕಿನ ಯಲ್ಲಾಪುರ, ನಾರಾಯಣಪುರ, ತೊಗರಿಕಟ್ಟಿ, ಹುಲಿಕಟ್ಟಿ, ಹಾರಕನಾಳ್ ಸಣ್ಣತಾಂಡ ಹಾಗೂ ಇತರೆ ಗ್ರಾಮಗಳ ರಸ್ತೆಯಲ್ಲಿ ಎಸಿ ಪ್ರಸನ್ನಕುಮಾರ, ತಹಶೀಲ್ದಾರ್ ನಂದೀಶ ಹಾಗೂ ಪೊಲೀಸರೊಂದಿಗೆ

**ಹರಪನಹಳ್ಳಿ ತಾಲ್ಲೂಕು ಗ್ರಾಮಗಳ ರಸ್ತೆಯಲ್ಲಿ ಒಕ್ಕಲು ಮಾಡುತ್ತಿದ್ದ ರೈತರಿಗೆ ನ್ಯಾಯಾಧೀಶರಾದ ಮಂಜುಳಾ ಶಿವಪ್ಪ ಉಂಡಿ ಅವರಿಂದ ಅರಿವು, ಎಚ್ಚರಿಕೆ.**

ಸಂಚರಿಸಿ ರಸ್ತೆಯಲ್ಲಿ ಕಣ ಮಾಡಿಕೊಂಡು ತೊಗರಿ, ರಾಗಿ ಮುಂತಾದ ಆಹಾರ ಧಾನ್ಯಗಳನ್ನು ಒಕ್ಕುತ್ತಿರುವ ರೈತರನ್ನು ತರಾಟೆಗೆ ತೆಗೆದುಕೊಂಡರು. ಅಲ್ಲದೆ ಇದೇ ರೀತಿ ಮುಂದುವರೆದರೆ ಕಾನೂನು ಕ್ರಮ ಜರುಗಿಸುವುದಾಗಿ ಎಚ್ಚರಿಸಿದರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ನ್ಯಾಯಾಧೀಶರು, ರಸ್ತೆಯಲ್ಲಿ **(4ನೇ ಪುಟಕ್ಕೆ)**

## 17 ರಂದು ರಾಣೇಬೆನ್ನೂರಿಗೆ ಕುರುಬ ಜಾಗೃತಿ ಪಾದಯಾತ್ರೆ



ರಾಣೇಬೆನ್ನೂರು, ಜ.13- ಎಸ್.ಟಿ. ಪಟ್ಟಿಯಲ್ಲಿದ್ದು ಮೀಸಲಾತಿಯಿಂದ ವಂಚಿತರಾಗಿರುವ ಕುರುಬರನ್ನು ಎಸ್ಟಿ ಮೀಸಲಾತಿಗೆ ಒಳಪಡಿಸುವಂತೆ ಒತ್ತಾಯಿಸಿ, ನಾಡಿದ್ದು ದಿನಾಂಕ 15 ರಂದು ಕಾಗಿನೆಲೆಯಿಂದ ಹೊರಡುವ ಕನಕ ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮಿಗಳ ನೇತೃತ್ವದ ಕುರುಬರ ಜಾಗೃತಿ ಪಾದಯಾತ್ರೆ ದಿನಾಂಕ 17 ರಂದು ಬೆಳಿಗ್ಗೆ ತಾಲ್ಲೂಕಿನ ಹೂಲಿಹಳ್ಳಿಗೆ ಆಗಮಿಸಲಿದ್ದು, ಸಂಜೆ ರಾಣೇಬೆನ್ನೂರು ತಲುಪಲಿದೆ ಎಂದು ಕುರುಬ ಸಂಘದ ಅಧ್ಯಕ್ಷ ಷಣ್ಮುಖಪ್ಪ ಕಂಬಳಿ ತಿಳಿಸಿದ್ದಾರೆ.

ಪಟ್ಟಣದ ಕುರುಬರ ಸಹಕಾರಿ ಸಂಘದಲ್ಲಿ ನಡೆಸಿದ ಮಾಧ್ಯಮ ಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ನಗರದ ಹೊರವಲಯದ ಛತ್ರದ ದುರ್ಗಮ್ಮ ಗುಡಿಯಿಂದ ಡೊಳ್ಳು, ಛತ್ರ ಚಾಮರದ ಜೊತೆಗೆ ಮಂಗಳಕರ ವಾದ್ಯಗಳೊಂದಿಗೆ ಪಾದಯಾತ್ರೆಯು ಹೊರಬೀರಪ್ಪನ ಗುಡಿಗೆ ತಲುಪಿ ನಂತರ **(2ನೇ ಪುಟಕ್ಕೆ)**

## ಪ್ರತಿಭಟನಾ ರೈತರಿಂದ ಕೃಷಿ ಕಾಯ್ದೆ ಪ್ರತಿಗಳ ದಹನ

ನವದೆಹಲಿ, ಜ. 13 – ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರು, ಲೊಹ್ರಿ ಉತ್ಸವದ ಸಂದರ್ಭದಲ್ಲಿ ಕಾಯ್ದೆಗಳ ಪ್ರತಿಗಳನ್ನು ದಹನ ಮಾಡಿದ್ದಾರೆ. ಜನವರಿ 26ರಂದು ಕಿಸಾನ್ ಪರೇಡ್ ನಡೆಸಲು ಪ್ರಸ್ತಾಪಿಸಲಾಗಿದ್ದು, ಈ ಸಂದರ್ಭದಲ್ಲಿ ರಾಜಧಾನಿ 300 ಕಿ.ಮೀ. ವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಜನರು ಬೃಹತ್ ಪ್ರಮಾಣದಲ್ಲಿ ಸೇರಬೇಕೆಂದು ರೈತ ಸಂಘಟನೆಯೊಂದು ಕರೆ ನೀಡಿದೆ.

ಗಣರಾಜ್ಯೋತ್ಸವದ ಮುನ್ನಾ ದಿನದಂದು ರೈತರು ದೊಡ್ಡ ಸಂಖ್ಯೆಯಲ್ಲಿ ದೆಹಲಿ ಗಡಿ ಬಳಿ ಸೇರಬೇಕೆಂದು ಆಲ್ ಇಂಡಿಯಾ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ಕರೆ ನೀಡಿದೆ.

ಸಿಂಘು ಗಡಿಯಲ್ಲಿ ಬುಧವಾರ ರಾತ್ರಿ ಕೃಷಿ **(2ನೇ ಪುಟಕ್ಕೆ)**


**ಅಭಿನಂದನೆಗಳು**



ಕರ್ನಾಟಕ ರಾಜ್ಯ ಅಕ್ಕಿ ಗಿರಣಿ ಮಾಲೀಕರ ಸಂಘದ ಉಪಾಧ್ಯಕ್ಷರು ಹಾಗೂ ದಾವಣಗೆರೆ ಜಿಲ್ಲೆಯ ಅಕ್ಕಿ ಗಿರಣಿ ಮಾಲೀಕರ ಸಂಘದ ಕಾರ್ಯದರ್ಶಿಗಳಾದ

**ಶ್ರೀ ಕೋಗುಂಡಿ ಬಕ್ಕೇಶಪ್ಪನವರು**

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟ ಬೆಂಗಳೂರು

ಇದರ ಆಡಳಿತ ಮಂಡಳಿಯ ನಿರ್ದೇಶಕರಾಗಿ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಪ್ರತಿನಿಧಿಗಳಾಗಿ ಎರಡನೇ ಬಾರಿ ಅವಿರೋಧವಾಗಿ ಆಯ್ಕೆಯಾಗಿರುವ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

◆ ದಾವಣಗೆರೆ ಜಿಲ್ಲೆಯ ಅಕ್ಕಿ ಗಿರಣಿ ಮಾಲೀಕರ ಸಂಘ
◆ ಕರ್ನಾಟಕ ರಾಜ್ಯ ಅಕ್ಕಿ ಗಿರಣಿ ಮಾಲೀಕರ ಸಂಘ, ಬೆಂಗಳೂರು.



**ಸವಿ ನೆನಪು**



ಲಿಂ॥ ಶ್ರೀಮತಿ ಪ್ರೇಮ ರಾಜಶೇಖರ್ ಮುದೇಗೌಡ್ರ
ನಿಧನ : 14.01.2013

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಮುದೇಗೌಡ್ರ ರಾಜಶೇಖರ್
ಪುತ್ರಿ: ಶ್ರೀಮತಿ ನೀತಾ ವಿಕಾಸ್, ಅಳಿಯ : ಎಂ.ಎಸ್. ವಿಕಾಸ್ ಮೆಳ್ಳೇಕಟ್ಟೆ
ಮೊಮ್ಮಕ್ಕಳು : ಎಂ.ವಿ. ಜಯಧರ, ಎಂ.ವಿ. ಪ್ರೇರಣ
ಹಾಗೂ ಮುದೇಗೌಡ್ರು ವಂಶಸ್ಥರು.



ಎ.ವಿ.ಕೆ. ಕಾಲೇಜಿನ ಪ್ರಾಧ್ಯಾಪಕರಾಗಿದ್ದ

**ಪ್ರಮೀಳಾ ಷಣ್ಮುಖಪ್ಪ ನಿಧನ**



ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರದ ವಾಸಿ, ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಸಮಾಜಶಾಸ್ತ್ರ ಪ್ರಾಧ್ಯಾಪಕರಾದ **ಶ್ರೀಮತಿ ಪ್ರಮೀಳಾ ಷಣ್ಮುಖಪ್ಪ (ಗೌಡರ)** ಅವರು ದಿನಾಂಕ 13.01.2021ರ ಬುಧವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 71 ವರ್ಷ ವಯಸ್ಸಾಗಿತ್ತು. ಪ್ರಮೀಳಾ, ಎವಿಕೆ ಕಾಲೇಜಿನ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾದ ಷಣ್ಮುಖಪ್ಪ ಅವರ ಧರ್ಮಪತ್ನಿ. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.01.2021ರ ಗುರುವಾರ ಮಧ್ಯಾಹ್ನ 12.30 ಕ್ಕೆ ದಾವಣಗೆರೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

# ಆಸ್ತಿ ತೆರಿಗೆ ಹೆಚ್ಚಳ

(1ನೇಪುಟದಿಂದ) ವಿಧಾನಮಂಡಲದ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದರು.

ಕಾಯ್ದೆಗೆ ತಿದ್ದುಪಡಿ ತರುವುದರಿಂದ ಸ್ಥಳೀಯ ಸಂಸ್ಥೆಗಳಿಗೆ ಆಸ್ತಿ ತೆರಿಗೆ ಆದಾಯ ಹೆಚ್ಚಾಗಲಿದ್ದು, ಅವುಗಳನ್ನು ಆರ್ಥಿಕವಾಗಿ ಬಲಪಡಿಸಲು ಸಾಧ್ಯವಾಗುತ್ತದೆ ಎಂದು ಸಚಿವರು ಹೇಳಿದ್ದಾರೆ.

2020-21ನೇ ಸಾಲಿನಲ್ಲಿ ಜಿ.ಎಸ್.ಡಿ.ಪಿ.,ಯ ಶೇ 0.25 ಭಾಗವನ್ನು ಹೆಚ್ಚುವರಿಯಾಗಿ ಕೇಂದ್ರ ದಿಂದ ಪಡೆಯಲು ಸಾಧ್ಯವಾಗುತ್ತದೆ ಎಂದರು. ಖಾಲಿ ನಿವೇಶನಗಳಿಗೂ ಅದರ ವಿಸ್ತೀರ್ಣದ ಆಧಾರದ ಮೇಲೆ ತೆರಿಗೆ ಹೆಚ್ಚಳವಾಗಲಿದೆ ಎಂದು ವಿವರಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷರಾಗಿದ್ದ ಶ್ರೀ ಬಾಲಗಂಗಧರನಾಥ ಸ್ವಾಮೀಜಿಯವರ ಹುಟ್ಟೂರಾದ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಬಾನಂದೂರಿನಲ್ಲಿ ಸುಮಾರು 25 ಕೋಟಿ ವೆಚ್ಚದಲ್ಲಿ ಪಾರಂಪರಿಕ ಮತ್ತು ಸಾಂಸ್ಕೃತಿಕ ತಾಣ ನಿರ್ಮಿಸಲು ಸರ್ಕಾರ ತೀರ್ಮಾನ ಕೈಗೊಂಡಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಮುಂದಿನ 5 ವರ್ಷಗಳ ಅವಧಿಯಲ್ಲಿ ರಾಜ್ಯಾದ್ಯಂತ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ 10,034 ಪೊಲೀಸ್ ವಸತಿಗೃಹಗಳನ್ನು ನಿರ್ಮಾಣ ಮಾಡಲು ಸಂಪುಟ ಸಮ್ಮತಿಸಿದೆ.

ತೀವ್ರ ಬರಗಾಲಕ್ಕೆ ತುತ್ತಾಗಿದ್ದ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಕೆರೆಗಳಿಗೆ 200 ಕೋಟಿ ವೆಚ್ಚದಲ್ಲಿ ನೀರು ತುಂಬಿಸುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ ಎಂದರು.

ದಾವಣಗೆರೆ ಜಿಲ್ಲೆ ಆನಗೋಡಿನಲ್ಲಿ ಕ್ರಷರ್ ಘಟಕ ನಿರ್ಮಾಣ ಮಾಡಲು ಖಾಸಗಿ ಸಂಸ್ಥೆಗೆ 30 ವರ್ಷದ ಭೋಗ್ಯಕ್ಕೆ 12 ಎಕರೆ ಜಮೀನನ್ನು ಮಂಜೂರು ಮಾಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.

ವಿಕಲಚೇತನ ಹಿರಿಯ ನಾಗರಿಕರ ಸಬಲೀಕರಣ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದ್ದು, ನೇರ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ. ಕೆಳಹಂತದಿಂದ ಪ್ರಥಮ ದರ್ಜೆ ಸಹಾಯಕರ ನೇಮಕಾತಿ ಮಾಡಿಕೊಳ್ಳಲು ಇದರಿಂದ ಅನುಕೂಲವಾಗಲಿದೆ ಎಂದು ಹೇಳಿದರು.

ಸಮಗ್ರ ಜಲ ಸಂಪನ್ಮೂಲ ಉನ್ನತ ಕೇಂದ್ರ ಸಮಿತಿ ರಚನೆಗೆ ಅನುಮತಿ ಕೊಡಲಾಗಿದೆ ಎಂದು ತಿಳಿಸಿದ ಅವರು, ಕೌಶಲ್ಯ ಅಭಿವೃದ್ಧಿ ಯೋಜನೆಯನ್ನು ಉನ್ನತೀಕರಿಸಲು ಒಪ್ಪಿಗೆ ಸೂಚಿಸಲಾಗಿದೆ. ಚಿತ್ರದುರ್ಗದ ಮುರುಘಾ ಮಠದಲ್ಲಿ 325 ಅಡಿ ಬಸವೇಶ್ವರ ಪುತ್ಥಳಿಯನ್ನು 15 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು. ಈಗಾಗಲೇ 10 ಕೋಟಿ ಅನುದಾನ ನೀಡಲಾಗಿದ್ದು, ಉಳಿದ 5 ಕೋಟಿ ಹಣ ಬಿಡುಗಡೆಗೆ ಸಂಪುಟ ಸಮ್ಮತಿಸಿದೆ ಎಂದರು.

# ಮಲೇಬೆನ್ನೂರಿನಲ್ಲಿ ಕೋವಿಡ್ ಲಸಿಕೆಗೆ ವ್ಯವಸ್ಥೆ : ಪರಿಶೀಲನೆ




ಮಲೇಬೆನ್ನೂರು ಜ.13 - ದೇಶದ್ಯಾಂತ ಇದೇ ದಿನಾಂಕ 16 ರಿಂದ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮ ಆರಂಭವಾಗಲಿದ್ದು, ಈ ಹಿನ್ನೆಲೆಯಲ್ಲಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಬುಧವಾರ ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ನಟರಾಜ್ ಡಿಹೆಚ್‌ಓ ಡಾ. ಚಂದ್ರಮೋಹನ್ ಅವರು ಭೇಟಿ ನೀಡಿ ಕೋವಿಡ್ ಡ್ರೈರನ್ ಬಗ್ಗೆ ಪರಿಶೀಲಿಸಿದರು. ಮೊದಲ ಹಂತದಲ್ಲಿ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಕೇಂದ್ರಗಳ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ವ್ಯಾಕ್ಸಿನ್ ನೀಡಲು ಎಲ್ಲಾ ಸಿದ್ದತೆಗಳನ್ನು ಮಾಡಲಾಗುತ್ತಿದೆ.

ಹರಿಹರ ತಾಲ್ಲೂಕಿನಲ್ಲಿ ಹರಿಹರ, ಕೊಂಡಜ್ಜಿ, ಮಲೇಬೆನ್ನೂರು ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ನೀಡುವ ವ್ಯವಸ್ಥೆ ಮಾಡಿದ್ದು ಮಲೇಬೆನ್ನೂರು ಕೇಂದ್ರದಲ್ಲಿ ಉಕ್ಕಡಗಾತ್ರಿ, ನಂದಿಗುಡಿ, ಕೊಕ್ಕನೂರು, ಭಾನುವಳ್ಳಿ, ಸಿರಿಗೆರೆ, ದೇವರಬೆಳಕೆರೆ ಆರೋಗ್ಯ ಕೇಂದ್ರಗಳ ಸಿಬ್ಬಂದಿಗಳಿಗೆ ಲಸಿಕೆ ನೀಡಲಾಗುವುದೆಂದು ಡಾ. ನಟರಾಜ ಪತ್ರಕರ್ತರಿಗೆ ತಿಳಿಸಿದರು.

ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ, ಹಿರಿಯ ಆರೋಗ್ಯ ಸಹಾಯಕ ಎಂ.ಉಮ್ಮಣ್ಣ, ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ರಾಜು, ರುದ್ರಮ್ಮ, ಅವಿನಾಶ್ ಈ ವೇಳೆ ಹಾಜರಿದ್ದರು.

## ಸಂಕ್ರಾಂತಿ....



ಎಳ್ಳು ಬೆಲ್ಲವ ಸವಿಯೋಣ
ಒಳ್ಳೆಯ
ಮಾತುಗಳಾಡೋಣ
ಸಂಕ್ರಾಂತಿ ಹಬ್ಬದಿ ನಲಿಯೋಣ
ಸಂತೋಷವನು ಹಂಚೋಣ.

ಕಬ್ಬಿನ ಸಿಹಿಯನು ಹೀರುತಲಿ
ಮನಸಿನ ಕಹಿಯನು ಮರೆಯೋಣ
ಸಿಹಿ ಕಹಿಗಳನು ಸಮಚಿತ್ತದಲಿ
ಸ್ವೀಕರಿಸುತ ಮುನ್ನಡೆಯೋಣ.

ದ್ವೇಷವ ಮರೆತು ಸ್ನೇಹದಿ ಕಲೆತು
ಭಾವೈಕ್ಯತೆಯನು ಮೆರೆಸೋಣ
ಜಗಳ, ಕದನ,ಕೋಪವ ತೊರೆದು
ಹರುಷದಿ ಎಲ್ಲರು ಬಾಳೋಣ.

ರೈತಾಪಿ ಜನರು ದನಕರುಗಳಿಗೆ
ಪೂಜೆಯ ಮಾಡುತ ನಮಿಸುವರು
ಮೆರವಣಿಗೆಯಲಿ ಸಿಂಗಾರ ಮಾಡಿ
ಕಿಚ್ಚನು ಹಾಯಿಸಿ ನಲಿಯುವರು.

ಉತ್ತರಾಯಣದ ಪುಣ್ಯಕಾಲವಿದು
ಬರುವುದು ವರ್ಷದಲೊಂದು ದಿನ
ದಕ್ಷಿಣದಿಂದ ಉತ್ತರ ದಿಕ್ಕಿಗೆ
ಪ್ರಾರಂಭವು ಸೂರ್ಯನ ಪಯಣ.

ವರ್ಷದಲ್ಲಿಯೇ ಪುಣ್ಯಕಾಲವಿದು
ಸ್ವರ್ಗದ ಬಾಗಿಲು ತೆರೆದಿಹುದು
ಎನ್ನುವ ನಂಬಿಕೆಯಿಂದಲಿ ನಮ್ಮಯ
ಬದುಕಲಿ ಸಂ....ಕ್ರಾಂತಿಯ
ನಡೆಸೋಣ.

ಹಬ್ಬಗಳೆಲ್ಲ ಯಾಂತ್ರಿಕವಾಗದೆ
ಸಾಂಪ್ರದಾಯಿಕವಾಗಿರಿಸೋಣ
ಗುರು-ಹಿರಿಯರು ತೋರಿದ
ಸನ್ಮಾರ್ಗದಿ
ನಡೆಯುತ ಬಾಳನು ಬೆಳಗೋಣ.

ಎಳ್ಳು ಬೆಲ್ಲ ಇಲ್ಲದ ಸಂಕ್ರಾಂತಿಯ
ಕಲ್ಪಿಸಿಕೊಳ್ಳುವುದಸಾಧ್ಯವು
ಒಬ್ಬರಿಗೊಬ್ಬರು ಹಂಚಿದಾಗಲೇ
ಬೆಳೆವುದು ಸುಮಧುರ ಬಾಂಧವ್ಯವು.

- ಜಿ.ಎಸ್.ಗಾಯತ್ರಿ
ಶಿಕ್ಷಕಿ, ಬಾಪೂಜಿ ಶಾಲೆ, ಹರಿಹರ.

## ಮಕರ ಸಂಕ್ರಾಂತಿ

ಸಂಭ್ರಮದ ಮಕರ ಸಂಕ್ರಾಂತಿಗೆ ಸ್ವಾಗತ
ವರುಷದ ಮೊದಲನೇ ಹಬ್ಬವೆಂದೇ ಸೀಮಿತ
ಹೆಂಗಳೆಯರೆಲ್ಲಾ ಎಳ್ಳು-ಬೆಲ್ಲ ತಯಾರಿಸುವಲ್ಲಿ
ನಿರತ ಆಚರಿಸೋಣ ಸಂಕ್ರಾಂತಿ,
ಸಿಹಿಯನ್ನು ಸವಿಯುತ-ಸವಿಯುತಾ

ಇದುವೆ ಉತ್ತರಾಯಣ ಪುಣ್ಯ ಕಾಲ
ಸೂರ್ಯದೇವನು ಮಕರ ರಾಶಿಗೆ
ಪ್ರವೇಶಿಸುವ ಸುದಿನಈ ಸಂಪ್ರದಾಯ
ಮುಂದುವರೆಯಲಿ ನೂರು ಕಾಲ
ಹಿರಿಯರ ಆಶೀರ್ವಾದವಿರಲಿ ಸದಾಕಾಲ

ಪ್ರಾತಕಾಲದಲ್ಲಿನ ಪುಣ್ಯ ಕ್ಷೇತ್ರದ ಗಂಗಾಸ್ನಾನ
ಪಾಪ ಕರ್ಮಗಳೆಲ್ಲವೂ ನೀರಿನಲ್ಲಿ ಲೀನ
ಸ್ವರ್ಗದ ಬಾಗಿಲು ತೆರೆಯುವ ಸುವರ್ಣದಿನ
ದೇವಾನುದೇವತೆಗಳೆಲ್ಲರಿಗೂ
ಕೋಟಿ-ಕೋಟಿ ನಮನ

ಮುಂಜಾನೆ ಎದ್ದೊಡನೆ ಎಣ್ಣೆ ನೀರಿನ ಸ್ನಾನ
ಭಕ್ತಿ ಭಾವಗಳಿಂದ ಮನೆ ದೇವರ ಜಪ-ತಪ-ಧ್ಯಾನ
ಎಳ್ಳು ಬೆಲ್ಲವ ತಿಂದು ಸವಿ ಸವಿಯಾಗಿ
ಮಾತನಾಡೋಣ ಆಚರಿಸಿ
ಎಲ್ಲರೊಟ್ಟಿಗೆ ಮಕರ-ಸಂಕ್ರಮಣ

ಮನೆ ಮನೆಗೆ ಬೀರೋಣ ಎಳ್ಳು ಬೆಲ್ಲವನ್ನು
ಮುತ್ತೈದೆಯರಿಗೆ ಧಾನ ಮಾಡಿ, ಫಲ ಪುಷ್ಪ
ತಾಂಬೂಲಗಳನ್ನು ಪಡೆಯೋಣ
ಜನ ಮೆಚ್ಚುಗೆಯ ಪ್ರೀತಿ ವಿಶ್ವಾಸವನ್ನು
ಏರೋಣ ಪ್ರೀತಿಯೆಂಬ ಆನಂದದ ಶಿಖರವನ್ನು...,

- ಡಾ. ದೀಪಶ್ರೀ ಪ್ರಮೋದ್ ಗುಜ್ಜರ್

## ಸುಗ್ಗಿಯ ಹಿಗ್ಗು

ಸಂಭ್ರಮದ ಸಂಕ್ರಾಂತಿ ಸುಗ್ಗಿಯಲಿ
ನಾಡಿನ ಜನರೆಲ್ಲಾ ಹಿಗ್ಗಿನಲಿ.........
ದವಸ- ಧಾನ್ಯವು ರಾಶಿ ರಾಶಿಯಲಿ
ಸಂತಸದ ಸವಿಯು ಹುಗ್ಗಿಯಲಿ....

ಅಂಗಳದ ತುಂಬೆಲ್ಲ ರಂಗಿನ ರಂಗೋಲಿ
ಬಾನಲ್ಲಿ ಚೆಲ್ಲಿ ತುಳುಕಿದ ಓಕುಳಿ
ಕಣದ ತುಂಬೆಲ್ಲ ಬೆಳಸಿಯ ಗೋಪುರವು
ಮನೆಯಲ್ಲಿ ಹರಡಿದ ಧೂಪ ದೀಪವು.

ಎಳ್ಳು, ಬೆಲ್ಲ, ಕೊಬ್ಬರಿ, ಕಡಲೆ ಸಂಗಮವು
ಕಬ್ಬು, ಬಾಳೆ, ಬೋರೆ, ಕಿತ್ತಳೆ ಫಲವು
ಬಗೆ ಬಗೆಯಲ್ಲಿ ವ್ಯಂಜನದ ಭೋಜನವು
ತನು,ಮನಕೆ ತುಂಬುವ ಶಕ್ತಿ ಬಲವು.

ಉತ್ತರಾಯಣ ಸಂಕ್ರಮಣದ ಸಂಕ್ರಾಂತಿ
ದೂರ ಸರಿಯಲಿ ಮನದಲ್ಲಿಹ ಭೀತಿ
ನವ ಭಾವದ ನವ ಪರ್ವವು ತರಲಿ
ಜಗದ ಮನುಜರಿಗೆ ನೆಮ್ಮದಿಯು ಇರಲಿ.

ಒಳ್ಳೆಯ ಮನದಲ್ಲಿ- ಒಳ್ಳೆಯ ನುಡಿಯಲ್ಲಿ
ಎಳ್ಳು- ಬೆಲ್ಲವ ಹಂಚೋಣ ಪ್ರೀತಿಯಲಿ
ಆಶಯವು ಶುಭದಲ್ಲಿ ಬಯಸೋಣ ನಾವಿಲ್ಲಿ
ಜಗವು ಶಾಂತಿಯ ಬೆಳಕಲ್ಲಿ ಬೆಳಗಲಿ.

- ವೀಣಾ ಕೃಷ್ಣಮೂರ್ತಿ, ದಾವಣಗೆರೆ.

## ಸಿಹಿಯಾಗಲಿ ಸಂಕ್ರಮಣ

ಹರುಷವನು ಹೊತ್ತು ತಂದಿಹುದು ಸಂಕ್ರಾಂತಿ
ಮನಗಳ ಬೆಸೆಯಲು ನವನವೀನ ಕ್ರಾಂತಿ
ಜಗದೆಲ್ಲೆಡೆ ನೆಲೆಸಲಿ ಸಂಯಮದಿ ಶಾಂತಿ
ಸಂಬಂಧಗಳು ಮೇಳೈಸಲು ಹಾರೈಸಲಿ ಸಂಕ್ರಾಂತಿ

ಎಳ್ಳುಬೆಲ್ಲದ ಸವಿಯಾದ ಸಮರಸದ ಸಮ್ಮಿಶ್ರಣ
ಜಾನುವಾರುಗಳ ಸಡಗರದ ದಿಬ್ಬಣ
ಎಳೆಸು ಬೆಳೆಗಳ ಹುಮ್ಮಸಿಗೆ ಕಾರಣ
ಒಂದಾಗಿ - ಸಾಮರಸ್ಯದಿ ಬಾಳೋಣ
ಸವಿಯಾದ ಸಾರ್ಥಕ ಬದುಕಿನ
ಪ್ರತಿರೂಪ ವಾಗಿರಲಿ ಸಂಕ್ರಮಣ

ಮಾಗಿಯ ಚಳಿಯಲ್ಲಿ ದ್ವೇಷಾಸೂಯೆಗಳ ಸುಡೋಣ
ನಂಬಿಕೆ ಬಿಸುಪಿನಲಿ ಮೈ ಬೆಚ್ಚಗಿರಿಸೋಣ
ಸ್ನೇಹ ಭಾವದ ಮೊಗ್ಗನು ಅರಳಿಸೋಣ
ಸಂಪ್ರೀತಿಯ ಸಾಂಗತ್ಯಗಳ ಸುಗಂಧ ಬೀರೋಣ

ಶಾಂತಿ ನೆಮ್ಮದಿಗಳ
ಕೊಡುಕೊಳ್ಳುವಿಕೆಯೇ ಸಂಕ್ರಾಂತಿಯು
ಎಳ್ಳು ಬೆಲ್ಲಗಳ ಕುಸುರೆಳ್ಳು ಹಂಚೋಣ

ಜಗದೊಳಿತಿಗಾಗಿ ಅನವರತ ಸುಖ ಶಾಂತಿ ಬಯಸುತ
ಆ ದೇವನ ಪ್ರಾರ್ಥಿಸೋಣ
ಸಂಕ್ರಮಣ ಹಬ್ಬವಿದು ನವನೀತವಿರಿಸೋಣ

- ಶ್ರೀಮತಿ ಸುನಿತಾ ಪ್ರಕಾಶ್

## ಮಕರ ಸಂಕ್ರಾಂತಿ - ಹಾಡಲಿ ಸರ್ವ ಶಾಂತಿಗೆ ನಾಂದಿ

ಬಂತು ಬಂತು ಎಳ್ಳು ಅಮವಾಸ್ಯೆಯ ಮಕರ ಸಂಕ್ರಮಣ
ಸೂರ್ಯ ದೇವ ಬದಲಾಯಿಸುವನು ತನ್ನ ಪಥ ಚಲನ

ಪ್ರಕೃತಿ ಮಾತೆಯ ದವಸ ಧಾನ್ಯಗಳ ಮಡಿಲು
ಬಸಿರಾಗಿದೆ. ಕೊಯ್ಲು ಮಾಡಿ ಫಸಲು ಪಡೆಯಲು ರೈತ
ಸಮೂಹ ಸಜ್ಜಾಗಿದೆ. ಭೂ ತಾಯಿಯನ್ನು
ಶ್ರದ್ಧಾಭಕ್ತಿಯಿಂದ ನಮಿಸೋಣ. ಮನು ಕುಲದ
ಆಧುನಿಕತೆಗೈದ ತಪ್ಪಿಗೆ ಕ್ಷಮೆ ಯಾಚಿಸೋಣ

ಎಳ್ಳು, ಬೆಲ್ಲ ಕಬ್ಬನ್ನು ಹಂಚಿ ಸ್ನೇಹ ಹೆಚ್ಚಿಸೋಣ.
ಪ್ರೀತಿ ಬಾಂಧವ್ಯದ ಬುನಾದಿಯನ್ನು ಭದ್ರವಾಗಿಸೋಣ

ಜಾತಿ ಮತ ಪಂಥಗಳ ಬೇಧಗಳ ತಾರತಮ್ಯ ನಶಿಸಲಿ.
ದ್ವೇಷ, ಅಸೂಯೆ ದುರಹಂಕಾರಗಳೇ ಶೂನ್ಯವಾಗಲಿ.

ಬನ್ನಿ ಒಂದಾಗಿ ಆಚರಿಸೋಣಈ ಮಕರಸಂಕ್ರಾಂತಿ
ಸಂಭ್ರಮ ಆಸ್ವಾದಿಸೋಣ ರೊಟ್ಟಿ , ಬುತ್ತಿ ಗೋಧಿ
ಹುಗ್ಗಿಯ ಘಮ ಘಮ

ಸಕಾರಾತ್ಮಕ ಚಿಂತನೆ, ಶುಚಿತ್ವದ ಆಲೋಚನೆ ರೋಗ
ನಿರೋಧಕತೆ ಶಕ್ತಿ ನಮ್ಮಲಿರಲಿ.
ಕೊರೊನದಂತಹ ಮಹಾಮಾರಿಯನ್ನು ಎದುರಿಸುವ
ಆತ್ಮಶಕ್ತಿ, ಉಕ್ಕಿನ ದೇಹ ನಮ್ಮದಾಗಲಿ.

ವಿಜ್ಞಾನಿಗಳ ಸತತ ಪರಿಶ್ರಮದ ಲಸಿಕೆ ಮನುಕುಲಕ್ಕೆ
ಸಂಜೀವಿನಿಯಾಗಲಿ. ರೋಗದ ಭೀತಿ ನಶಿಸಿ ಆರೋಗ್ಯ
ಆತ್ಮಸ್ಥೈರ್ಯ ವೃದ್ಧಿಸಲಿ. ಸಂಪತ್ತು ಸಮೃದ್ಧಿ
ನೂರ್ಮಡಿಯಾಗಿ ಎಲ್ಲೆಡೆ ಸುಖ ಶಾಂತಿ ನೆಲೆಸಲಿ.

- ಡಾ।। ಆರತಿ ಸುಂದರೇಶ್, ದಾವಣಗೆರೆ.

## ಸಂಕ್ರಾಂತಿ ಸ್ಪೆಷಲ್

ಸುಗ್ಗಿಯ ಸಂಕ್ರಾಂತಿ ಬಂತು
ಸೂರ್ಯ ಮಕರ ರಾಶಿಗೆ ಬಂದಾಯ್ತು
ಸಂಕ್ರಮಣದ ಪರ್ವಕಾಲ ಬಂತು
ಸವಿಯೋಣ ಎಳ್ಳು ಬೆಲ್ಲ ಎನ್ನುತ

ರೈತರೆಲ್ಲ ಧಾನ್ಯಗಳ ಪೂಜಿಸುವ ದಿನ
ರಾಶಿರಾಶಿ ಬೆಳೆಗಳ ಸಮೃದ್ಧಿಯ ದಿನ
ಶರತ್ ಋತುವಿನಿಂದ ವಸಂತಾಗಮನ
ಪರಮ ಭಕ್ತಿ ತೋರುವ ಉತ್ತರಾಯಣ

ಆಗಿದೆ ನವವರ್ಷಾಗಮನ ಆದಿತ್ಯನು
ಪುತ್ರನ ಮನೆಗಾಗಮನ ಆದಿದೇವತೆಗಳ
ನಮನ ಆನಂದದಿಂದ ನಲಿವ ದಿನ

ಸವಿನುಡಿಯಾಡುತ ಎಲ್ಲರೊಡನೆ ಬೆರೆತು
ಸಡಗರದಿಂದ ಸಕ್ಕರೆ ಅಚ್ಚು ಸವಿದು
ಸಂತಸದಿಂದ ಕಬ್ಬು ತಿಂದು
ಸಮರಸವೇ ಜೀವನವೆನ್ನುತ
ಮುದ್ದುಕೃಷ್ಣನ ನೆನೆದು

- ಕೋಮಲ ವಿ ಕುಮಾರ್

## ಕೋಲೊಂದು ಸಿಕ್ಕರೆ ಎಷ್ಟು ಚೆನ್ನ

ಕೋಲೊಂದು ಸಿಕ್ಕರೆ ಎಷ್ಟು ಚೆನ್ನ
ಕೈಲಿರೆ ಕೋಲು ಬಹಳ ಚೆನ್ನ

ನಾಯಿಗಳು ತಂತಾನೆ ದೂರ ಸರಿಯುವವು
ಬಾಯ್ಬಿಟ್ಟು ಬೈಯ್ಯುವರು ಸುಮ್ಮನಾಗುವರು
ಕಾಯಿ ಹೂ ಕೀಳಲು ಬಹಳ ಸಹಾಯವು
ಭಯ ನಿವಾರಣೆಗೆ ಶ್ರೇಷ್ಠ ಆಯುಧವು

ಎತ್ತರದ ಚಿಲಕ ಎಳೆಯಲೂಬಹುದೂ
ಬತ್ತಿಹ ದೇಹಕೆ ಆಧಾರವು
ನಿತ್ಯ ಬೀಳದಹಾಗೆ ಕಾಪಾಡುತಿಹುದು
ಚಿತ್ತಕ್ಕೆ ಧೈರ್ಯ ತುಂಬುತಿಹುದು

ತೂಗುವ ಮುದುಕರಿಗೆ ಬೇಕೇ ಬೇಕಿದು
ಬಗ್ಗದ ಹಾಗೆ ನೋಡಿಕೊಳ್ಳುವುದು
ಬಾಗಿಹ ಗಿಡವ ಎತ್ತಿ ಹಿಡಿಯುವುದು
ಬೇಗ ನಡೆಸಿ ಗುರಿ ಮುಟ್ಟಿಸುವುದು

ಎಟುಕದ ಕಾಯ್ಗಳ ಹೊಡೆದು ಬೀಳಿಸಲು
ಕಟುಕರ ಕಳ್ಳರ ಸೊಕ್ಕು ಅಡಗಿಸಲು
ಪುಟ್ಟ ಮಕ್ಕಳಿಗೆ ಕುದುರೆ ಆಡಿಸಲು
ಕೆಟ್ಟ ವಿದ್ಯಾರ್ಥಿಗಳ ದಾರಿಗೆ ತರಲು

ಮಡಿಯ ಬಟ್ಟೆಗಳ ಎತ್ತರಕೆ ಹರವಲು
ಜೇಡರ ಬಲೆಗಳ ಜಾಲಗಳ ತೆಗೆಯಲು
ಬಿಡದೆ ಬಳ್ಳಿಗಳ ಹಬ್ಬಿಸಿ ಬೆಳೆಸಲು
ಕಡೆಯ ತನಕ ಬಿಡದೆ ಜೊತೆಗಿರಲು

ಸಿರಿಹರಿ ಕೊಟ್ಟಿಹ ಸಂಪತ್ತು ಕೋಲು
ಪರಿಪರಿ ಕೆಲಸಕೆ ಸದಾ ಸಿದ್ಧವು
ಮರೆಯದೆ ಸದಾ ಮೂಲೆಯಲಿ ಇಹುದು
ಮರೆವವರ ನೋಡಿ ನಗುತಲಿಹುದು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್




ತೃತೀಯ ವರ್ಷದ ಪುಣ್ಯಸ್ಮರಣೆ

ದಿ।। ಶ್ರೀಮತಿ ಪ್ರೇಮಾ ಜಿ.ಸಿ.
ನಿಧನ : 26.12.2017

ನೀವು ನಮ್ಮನ್ನಗಲಿ ಇಂದಿಗೆ
ಮೂರು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ,
ಪತಿ : ಗೌಡ್ರ ಚನ್ನಬಸಪ್ಪ,
ಮಕ್ಕಳಾದ: ಶ್ರೀಮತಿ ಮುಕ್ತಾ ಶ್ರೀಕಾಂತ್,
ಶ್ರೀಮತಿ ಜಯಶೀಲಾ ಸುರೇಶ್,
ವಿಜಯಕುಮಾರ್,
ಸುಧಾ ಗೌಡ್ರ ಚನ್ನಬಸಪ್ಪ



### ಎನ್. ಕೆ. ಮಹದೇವಮ್ಮ (ಚಂಪಮ್ಮ) ನಿಧನ



ದಾವಣಗೆರೆ ಹೊಂಡದ ರಸ್ತೆ
ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಹತ್ತಿರದ ವಾಸಿ
ದಿ।। ಎನ್.ಕೆ. ಮಹೇಶ್ವರಪ್ಪನವರ ಧರ್ಮಪತ್ನಿ
ಶ್ರೀಮತಿ ಎನ್.ಕೆ. ಮಹದೇವಮ್ಮ
(ಚಂಪಮ್ಮ) ಅವರು
ದಿನಾಂಕ 13.01.2021 ರ ಬುಧವಾರ ರಾತ್ರಿ 8 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಮೊಮ್ಮಕ್ಕಳು ಸೊಸೆಯಂದಿರು, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.01.2021 ರ ಗುರುವಾರ ಮಧ್ಯಾಹ್ನ 12 ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗದವರು
ಮೊ. : 98444 12367, 86601 59405



### ಚಿರಸ್ಮರಣೆ



ಜನನ:
12.03.1962

ಮರಣ :
14.01.2016

ಶ್ರೀಮತಿ ಆರ್.ಎಲ್. ವಿಶಾಲಾಕ್ಷಿ
ನಿಮ್ಮ ದೈವ ಭಕ್ತಿಯಿಂದಾಗಿ ನಿಮ್ಮನ್ನು ಬೇಗನೇ ಆ ಭಗವಂತನು ತನ್ನ ಸನ್ನಿಧಿಗೆ ಕರೆದುಕೊಂಡ. ಈಗಲೂ ನಮ್ಮೊಂದಿಗೆ ಇದ್ದೀರೆಂದು ನಮ್ಮ ಭಾವನೆ.


ಸದಾ ನಿಮ್ಮ ಪುಣ್ಯ ಸ್ಮರಣೆಯಲ್ಲಿ :
ಪತಿ: ಕೆ.ಬಿ.ನಂಜುಂಡಪ್ಪ, ಮಕ್ಕಳು: ಕೆ.ಎನ್.ಶ್ರೀ ಹರ್ಷ
ಕೆ.ಎನ್. ನಿತಿನ್ ಸೊಸೆಯಂದಿರು :ಪಿ.ಜೆ. ಸ್ವಾತಿ, ಎಸ್. ಸ್ಫೂರ್ತಿ
ಮೊಮ್ಮಗ: ಧನ್ವಿಕ್ ದಾವಣಗೆರೆ. ದ್ಯಾಮಜ್ಜನ ವಂಶಸ್ಥರು, ಕ್ಯಾತನಹಳ್ಳಿ.
ಲಿಂಗೈಕ್ಯರ ಸಹೋದರ-ಸಹೋದರಿಯರು ಹಾಗೂ ಬಂಧು-ಮಿತ್ರರು.


## ನಗರದಲ್ಲಿ ಇಂದು ಅಯ್ಯಪ್ಪ ಸ್ವಾಮಿಯ ಪಡಿಪೂಜೆ

ಎಸ್. ನಿಜಲಿಂಗಪ್ಪ ಬಡಾವಣೆ, ಬಕ್ಕೇಶ್ವರ ಹೈಸ್ಕೂಲ್ ಹತ್ತಿರವಿರುವ ಶ್ರೀ ಸ್ವಾಮಿ ಅಯ್ಯಪ್ಪ ಸೇವಾ ಸಮಿತಿಯಿಂದ ಶ್ರೀ ಅಯ್ಯಪ್ಪ ಸ್ವಾಮಿಯ ಪಡಿಪೂಜೆ ಹಾಗೂ ಭಜನಾ ಕಾರ್ಯಕ್ರಮವು ಇಂದು ನಡೆಯಲಿದೆ.

ದೇವಸ್ಥಾನದಲ್ಲಿ ಬೆಳಿಗ್ಗೆ 7 ಗಂಟೆಗೆ ಪಂಚಾಮೃತ ಅಭಿಷೇಕ, ಗಣಹೋಮ ನಡೆಯಲಿವೆ. ಸಂಜೆ 6ಕ್ಕೆ ಮಕ್ಕರ ಸಂಕ್ರಾಂತಿ ಜ್ಯೋತಿ ದರ್ಶನ ಕಾರ್ಯಕ್ರಮ ನಡೆಯುವವು.


### ಮಲ್ಲೇಶ್ ಮಡಿವಾಳರ ನಿಧನ



ದಾವಣಗೆರೆ ಎಸ್.ಪಿ.ಎಸ್. ನಗರ 1ನೇ ಮೇನ್, 4ನೇ ಕ್ರಾಸ್ ಬೂದಾಳ್ ರಸ್ತೆ ವಾಸಿ (#502) ಮಲ್ಲೇಶ್ ಮಡಿವಾಳರ (47) ಅವರು ದಿನಾಂಕ 13.01.2021 ರಂದು ಬುಧವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.01.2021ರಂದು ಗುರುವಾರ ಮಧ್ಯಾಹ್ನ 12 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.


# ಜಾನಪದ ಸಂಗೀತವು ದೇಶೀ ಕಲೆಗಳ ಪ್ರತಿನಿಧಿ

## ಹರಪನಹಳ್ಳಿ : ಸಾಂಸ್ಕೃತಿಕ ಕಲೋತ್ಸವದಲ್ಲಿ ವೀಣಾ ಮಹಾಂತೇಶ್

ಹರಪನಹಳ್ಳಿ, ಜ.13 - ಗದಾಯುದ್ಧವು ನಮ್ಮ ಶಿಷ್ಟ ಪರಂಪರೆಯನ್ನು ಪ್ರತಿನಿಧಿಸಿದರೆ ಜಾನಪದ ಸಂಗೀತವು ದೇಶೀಕಲೆಗಳ ಪ್ರತಿನಿಧಿ. ಎರಡೂ ನಮ್ಮ ಸಾಂಸ್ಕೃತಿಕ ರಾಯಭಾರಿಗಳು ಎಂದು ಎಂ.ಪಿ.ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ.ವೀಣಾ ಮಹಾಂತೇಶ ಹೇಳಿದರು.

ಪಟ್ಟಣದ ಎಡಿಬಿ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪಟ್ಟಣದ ಇಂದಿರಾಗಾಂಧಿ ಎಸ್ಸಿ, ಎಸ್ಟಿ ಮಹಿಳಾ ಕಲ್ಯಾಣ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಪ್ರಾಯೋಜಿತ ಕಾರ್ಯಕ್ರಮ ಕಲಾ ಕಾರ್ತಿಕ ಸಾಂಸ್ಕೃತಿಕ ಕಲೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರನ್ನ ಗದಾಯುದ್ಧವನ್ನು ಬರೆದಾಗ ತನ್ನ ಆಶ್ರಯದಾತ ಇರಿವಬೆಂಡಂಗನನ್ನು ವೈಭವೀಕರಿಸುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದರೂ ಅದರಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ. ಕವಿಗಳು ಇತಿಹಾಸವನ್ನೂ ಮರುಸೃಷ್ಟಿಸುವ ಕಲೆಗಾರರು ಎಂದು ಅವರು ಹೇಳಿದರು.



ಇಂದಿರಾಗಾಂಧಿ ಎಸ್ಸಿ, ಎಸ್ಟಿ ಮಹಿಳಾ ಕಲ್ಯಾಣ ಸಂಸ್ಥೆಯ ಅಂಬುಜಾ ರಾಮಪ್ಪ ಉದ್ಘಾಟನೆ ನೆರವೇರಿಸಿ ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ಮುಂದೆಯೇ ಕುಳಿತು ಕೊಂಡಿರಬೇಕಾದ ಇಂದಿನ ಪರಿಸ್ಥಿತಿಯಲ್ಲಿ ಅವರನ್ನು ನಿಜ ಲೋಕಕ್ಕೆ ಕರೆತರಲು ರಂಗಭೂಮಿ ಸಾಹಿತ್ಯ ಕ್ಷೇತ್ರಗಳು ಸಹಕಾರಿ. ಒಳಿತು-ಕೆಡುಕುಗಳ ಕತ್ತಲು-ಬೆಳಕಿನ ನಡುವೆ ನಡೆಯುವ ಗದಾಯುದ್ಧ ನಮ್ಮೊಳಗೆ ನಡೆ ಯುವ ಅಂತರ್ಯುದ್ಧವನ್ನು ಪ್ರತಿನಿಧಿಸುತ್ತದೆ ಎಂದರು.

ಎಡಿಬಿ ಕಾಲೇಜ್ ಆಡಳಿತ ಮಂಡಳಿಯ ಅಧ್ಯಕ್ಷ ಅಕ್ಕಿ ಶಿವಕುಮಾರ್ ಮಾತನಾಡಿ ಕೊರೊನಾ ಕಾಲದ ಬಿಕ್ಕಟ್ಟುಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಚೇತೋಹಾರಿಯಾಗಬಲ್ಲವು. ಜಾನಪದ ಗೀತೆಗಳು ಜನರಿಂದಲೇ ಹುಟ್ಟಿ ಜನರ ನೋವು ನಲಿವುಗಳನ್ನು ದಾಖಲಿಸುತ್ತವೆ ಎಂದರು.

ನಂತರ ಸುಜಾತ ಮತ್ತು ತಂಡದವರಿಂದ ಜಾನಪದ ಗೀತೆಗಳ ಗಾಯನ ನಡೆಯಿತು. ಹಗರಿ ಬೊಮ್ಮನ ಹಳ್ಳಿಯ ಭಗತ್ ಸಿಂಗ್ ಕಲಾತಂಡದ ಯುವ ಕಲಾವಿದರು ಗದಾಯುದ್ಧ ನಾಟಕವನ್ನು ರಂಜನೀಯವಾಗಿ ಪ್ರದರ್ಶಿಸಿದರು. ಕಾರ್ಯಕ್ರಮವನ್ನು ಘಂಟಿ ನಾಗರಾಜ್ ನಿರೂಪಿಸಿ, ನಿರ್ವಹಿಸಿದರು. ಹುಲಿಗೆಮ್ಮ ಸರ್ದಾರ್ ಸ್ವಾಗತಿಸಿದರು.

## ರಾಣೇಬೆನ್ನೂರಿಗೆ ಜಾಗೃತಿ ಪಾದಯಾತ್ರೆ

(1ನೇ ಪುಟದಿಂದ) ಧರ್ಮ ಸಭೆ ನಡೆಯಲಿದೆ. ನಂತರ ಇಲ್ಲೇ ವಾಸ್ತವ್ಯ ಹೂಡಲಿದ್ದಾರೆ ಎಂದು ತಿಳಿಸಿದರು. ಇದೇ ದಿನಾಂಕ 18 ರಂದು ಬೆಳಿಗ್ಗೆ ಚಳಗೇರಿಗೆ ತೆರಳಲಿದ್ದು, ಧರ್ಮ ಸಭೆ ನಡೆಯಲಿದೆ. ಊಟ, ವಿಶ್ರಾಮದ ನಂತರ ಸಂಜೆ ಹರಿಹರದಲ್ಲಿ ಧರ್ಮಸಭೆಯಲ್ಲಿ ಪಾಲ್ಗೊಂಡು ಅಂದು ಅಲ್ಲೇ ವಾಸ್ತವ್ಯ ಹೂಡಲಿದ್ದಾರೆ ಎಂದು ಷಣ್ಮುಖಪ್ಪ ವಿವರಿಸಿದ್ದಾರೆ.

ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಆನಂದ ಹುಲಬನ್ನಿ, ಮೃತ್ಯುಂಜಯ ಗುದಗೇರ, ಚಂದ್ರಶೇಖರ್ ಕಂಬಳಿ, ರಾಜು ಮೈಲಾರ, ಹುಲಿಯಪ್ಪ ಮೆಡ್ಲೇರಿ, ರಮೇಶ ಕರಡೆಣ್ಣನವರ, ಭರಮಪ್ಪ ಪೂಜಾರ ಹಾಗು ಇನ್ನಿತರರಿದ್ದರು.

### ದಿನದ ಚುಟುಕು

ಭವ ಬಂಧನದ ಬಿಗಿತದಲಿ
ಭಾವುಕ ಮನವದು ಬೆರಗಿನಲಿ
ನಾಟಕದಾಟವು ತೆರೆಮರೆಯಲ್ಲಿ
ಆಚಾರ, ವಿಚಾರ ಪರಂಪರೆಯಲ್ಲಿ!

- ವೀಕೆಎಂ

## ರೈತರಿಂದ ಕೃಷಿ ಕಾಯ್ದೆ ಪ್ರತಿಗಳ ದಹನ

(1ನೇ ಪುಟದಿಂದ) ಕಾಯ್ದೆಯ ಒಂದು ಲಕ್ಷ ಪ್ರತಿಗಳನ್ನು ದಹಿಸಲಾಗಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಪರಮ್‌ಜೀತ್ ಸಿಂಗ್ ತಿಳಿಸಿದ್ದಾರೆ.

ಪಂಜಾಬ್ ಹಾಗೂ ಹರಿಯಾಣದಲ್ಲಿ ಹಿಂಗಾರು ಬೆಳೆ ಕಟಾವಿನ ಸಂಕೇತವಾಗಿ ಲೊಹ್ರಿ ಹಬ್ಬವನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಸಂಭ್ರಮದ ಸಂಕೇತವಾಗಿ ದೀಪೋತ್ಸವದ ಮೂಲಕ ಸಂಭ್ರಮಿಸಲಾಗುತ್ತದೆ. ಆದರೆ, ಈ ವರ್ಷ ಕೃಷಿ ಕಾಯ್ದೆಗಳ ಪ್ರತಿಗಳನ್ನು ಸುಡುವ ಮೂಲಕ ರೈತರು ಆಕ್ರೋಶ ಹೊರ ಹಾಕಿದ್ದಾರೆ.

## ಮಾತೃಛಾಯ ಚಿಣ್ಣರ ಉದ್ಯಾನವನ ಪುನರಾರಂಭ

ದಾವಣಗೆರೆಯ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಮಾತೃ ಛಾಯ ಚಿಣ್ಣರ ಉದ್ಯಾನವನವು ಇಂದಿನಿಂದ ಪುನರಾರಂಭ ಗೊಳ್ಳಲಿದೆ. ಮಕ್ಕಳಿಗೆ ಮನರಂ ಜನೆಗಾಗಿ ರೈಲು ಹಾಗೂ ಬಣ್ಣದ ಕಾರಂಜಿ ಪ್ರದರ್ಶನ ಏರ್ಪಡಿಸಲಾಗಿದೆ.

ಕೊರೊನಾ ಸೋಂಕಿನ ಪ್ರಯುಕ್ತ ಹರಡುವಿಕೆಯ ತಡೆಗಾಗಿ ಸುಮಾರು 10 ತಿಂಗಳುಗಳಿಂದ ಈ ಉದ್ಯಾನವನ್ನು ಬಂದ್ ಮಾಡಲಾಗಿತ್ತು. ಪ್ರೇಕ್ಷಕರ ಹಾಗೂ ಮಕ್ಕಳಿಗೋಸ್ಕರ ಇಂದಿನಿಂದ ಪುನರಾರಂಭವಾಗಲಿದೆ ಎಂದು ಮಾತೃಛಾಯ ಚಿಣ್ಣರ ಉದ್ಯಾನವನದ ಆಡಳಿತ ಮಂಡಳಿ ತಿಳಿಸಿದೆ.


### ಕುಂಬಳೂರು ಗ್ರಾಮದ ಅರ್ಚಕರಾದ ಕೆ.ಎಸ್. ಶ್ರೀನಿವಾಸ್ ನಿಧನ



ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ ಆರಾಧ್ಯ ದೈವ
ಶ್ರೀ ಹನುಮಂತ ದೇವರ ದೇವಸ್ಥಾನದ ಪ್ರಧಾನ ಅರ್ಚಕರಾದ
ಶ್ರೀ ಕೆ.ಎಸ್. ಶ್ರೀನಿವಾಸ್ (ಸೀನಪ್ಪ ಸ್ವಾಮಿ)
ಅವರು, ದಿನಾಂಕ 13.01.2021ರ ಬುಧವಾರ ತಡರಾತ್ರಿ
12 ಗಂಟೆಗೆ ನಿಧನರಾದರು.

ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಭಕ್ತರು ಸೇರಿದಂತೆ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.01.2021 ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಕುಂಬಳೂರಿನಲ್ಲಿ ನೆರವೇರಲಿದೆ. ಮೃತ ಶ್ರೀನಿವಾಸ್ ಅವರು ಸುಮಾರು 25 ವರ್ಷಗಳಿಂದ ಪ್ರಧಾನ ಅರ್ಚಕರಾಗಿ ಸೇವೆ ಸಲ್ಲಿಸಿದ್ದರೆಂದು ಕುಂಬಳೂರು ಗ್ರಾಮಸ್ಥರು ಕಂಬನಿ ಮಿಡಿದಿದ್ದಾರೆ.


# ಹರಿಹರಕ್ಕೆ ಇಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಗೃಹ ಸಚಿವ ಬೊಮ್ಮಾಯಿ

ಕೇಂದ್ರ ಸರ್ಕಾರದ ಸಂಸದೀಯ ವ್ಯವಹಾರ, ಕಲ್ಲಿದ್ದಲು ಮತ್ತು ಗಣಿಗಾರಿಕೆ ಸಚಿವ ಪ್ರಹ್ಲಾದ ಜೋಷಿ ಮತ್ತು ಕರ್ನಾಟಕದ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಇಂದು ಹರಿಹರಕ್ಕೆ ಆಗಮಿಸಲಿದ್ದಾರೆ.

ಜೋಷಿ ಮತ್ತು ಬೊಮ್ಮಾಯಿ ಅವರುಗಳು ಬೆಳಿಗ್ಗೆ 10.50 ಕ್ಕೆ ದಾವಣಗೆರೆಯ ಜಿಎಂಐಟಿ ಹೆಲಿಪ್ಯಾಡ್‌ಗೆ ಆಗಮಿಸುವರು.

ಬೆಳಿಗ್ಗೆ 11.15 ಕ್ಕೆ ರಸ್ತೆ ಮೂಲಕ ಹೊರಟು 11.30 ಕ್ಕೆ ಹರಿಹರ ತಲುಪಿ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರುಗಳ ಪೀಠದಲ್ಲಿ ಹರ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿರುವ ಸ್ವಾವಲಂಬಿ ಸಮಾ ವೇಶ-ಸಂಕ್ರಾಂತಿ ಸಂಭ್ರಮ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 12.15 ಕ್ಕೆ ಹರಿಹರದಿಂದ ರಸ್ತೆ ಮೂಲಕ ಹೊರಟು 12.30 ಕ್ಕೆ ಜಿಎಂಐಟಿ ಹೆಲಿಪ್ಯಾಡ್ ತಲುಪುವರು. 12.35 ಕ್ಕೆ ಜಿಎಂಐಟಿ ಹೆಲಿಪ್ಯಾಡ್‌ನಿಂದ ಹೆಲಿಕಾಪ್ಟರ್ ಮೂಲಕ ಹೊರಟು ಮಧ್ಯಾಹ್ನ 2 ಕ್ಕೆ ಹೆಚ್‌ಎಎಲ್ ವಿಮಾನ ನಿಲ್ದಾಣ ತಲುಪುವರು.

# ಸಂಕ್ರಾಂತಿ ಉತ್ತರಾಯಣ

**'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡು' ಎಂಬ ಗಾದೆ ಈಗ ಬರುತ್ತಿರುವ ಸಂಕ್ರಾಂತಿ ಹಬ್ಬಕ್ಕೆ ಮತ್ತೆ ನೆನಪಾಗುತ್ತಿದೆಯಲ್ಲವೇ... ಈ ಸಂಕ್ರಾಂತಿ ಹಬ್ಬ ಸೂರ್ಯಾರಾಧನೆಯ ಹಬ್ಬವಾಗಿರುವುದೂ ವಿಶೇಷ. ನಮ್ಮ ಇಡೀ ಭೂ ಮಂಡಲದ ಸೃಷ್ಠಿ, ಅದರ ಎಲ್ಲಾ ಜೀವ ವೈವಿಧ್ಯತೆಗೆ ಕಾರಣನಾದ ಸೂರ್ಯನನ್ನು ಅವನ ಚಲನೆಯ ಬದಲಾವಣೆಯ ಕಾಲವಾಗಿ ಗುರುತಿಸಿ ಸಂಭ್ರಮಿಸುತ್ತಾ ಬಂದ ಹಿರಿಯ ಜ್ಞಾನಿಗಳಿಗೊಂದು ಸಲಾಂ ಹೇಳಲೇಬೇಕು.**

ಕರ್ನಾಟಕದಲ್ಲಿ ಎಳ್ಳು, ಸಕ್ಕರೆ, ಬೆಲ್ಲ, ಕೊಬ್ಬರಿ, ಕಡಲೆಗಳ ಮಿಶ್ರಣವನ್ನು ನೆರೆಹೊರೆಯವರಿಗೆ, ಬಂಧು-ಮಿತ್ರರಿಗೆ ಹಂಚುವ ನಲ್ಮೆಯ ಸಾಮಾಜಿಕ ಸಂಪ್ರದಾಯ ಈ ಸಂಕ್ರಾಂತಿ ಹಬ್ಬದ ವಿಶೇಷಗಳಲ್ಲೊಂದು. ಹಲವೆಡೆಗಳಲ್ಲಿ ದನ ಕರುಗಳಿಗೆ ಮೈತೊಳೆದು, ಹೊತ್ತಿಸಿದ ಬೆಂಕಿಯನ್ನು ನೆಗೆದು ದಾಟಿಸುವ ಪರಿಯೂ ಉಂಟು.

ಜಗತ್ತಿಗೆ ಶಾಖ, ಬೆಳಕು ನೀಡಿ, ಇಡೀ ಭೂಮಂಡಲದ ಸಕಲ ಜೀವರಾಶಿಗಳಿಗೆ ಸದಾ ಜೀವಂತಿಕೆ ಚೈತನ್ಯ ನೀಡುತ್ತಿರುವ ಸೂರ್ಯನು, ಆಗಸದಲ್ಲಿ ಒಂದು ರಾಶಿಯಿಂದ ಮತ್ತೊಂದು ನಕ್ಷತ್ರ ರಾಶಿಗೆ ಪ್ರವೇಶಿಸುವ ಸಂಧಿಕಾಲಕ್ಕೆ ಸಂಕ್ರಾಂತಿ ಅಥವಾ ಸಂಕ್ರಮಣ ಎಂದು ಹೆಸರು. ಸೌರಮಾನದ ಪ್ರಕಾರ ಸೂರ್ಯನು ಮೇಷ, ವೃಷಭ, ಮಿಥುನ, ಕರ್ಕಾಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನು, ಮಕರ, ಕುಂಭ, ಮೀನ ಹೀಗೆ 12 ನಕ್ಷತ್ರ ರಾಶಿಗಳ ಮುನ್ನೆಲೆಯಲ್ಲಿ ಪ್ರವೇಶಿಸುವಾಗಲೂ ಸಂಕ್ರಾಂತಿ ಬರುತ್ತದೆ. ಆದರೆ ಅವುಗಳಲ್ಲಿ ಕರ್ಕಾಟಕ ಸಂಕ್ರಾಂತಿ ಹಾಗೂ ಮಕರ ಸಂಕ್ರಾಂತಿಗಳು ದಕ್ಷಿಣಾಯನ ಉತ್ತರಾಯಣಗಳ ಪ್ರಾರಂಭದ ದಿನಗಳಾದ್ದರಿಂದ ವಿಶೇಷ ಮಹತ್ವದವುಗಳಾಗಿವೆ. "ಸೂರ್ಯ ಆತ್ಮಾಜಗತಃ ತಸ್ಥುಷಶ್ಚ" ಎಂಬ ಶ್ಲೋಕ ಅರ್ಥಪೂರ್ಣವಾಗಿದೆ. ಅಂದರೆ ಸೂರ್ಯನು ಈ ಜಗತ್ತಿನ ಆತ್ಮ ಮತ್ತು ಈ ಜಗತ್ತಿನ ಕಣ್ಣು.

ಯುಗಾದಿಯಂದು ಬೇವು-ಬೆಲ್ಲ ಹಂಚುವಂತೆ, ಸಂಕ್ರಾಂತಿಯಲ್ಲಿ ಎಳ್ಳು-ಬೆಲ್ಲ ಹಂಚುವ, ತಿನ್ನುವ ಮೂಲಕ ಚಳಿಗಾಲ ದೇಹದ ಆಂತರಿಕ ಜಡ್ಡುತನಕ್ಕೆ, ಶೀತ, ಕೆಮ್ಮುಗಳಿಗೆ ಔಷಧೀಯಾಗಿಯೂ ಮಹತ್ವ ಪಡೆದಿವೆ ಈ ವಸ್ತುಗಳು.

**ಪುರಾತನ ನಂಬಿಕೆಗಳು :** ಪಿತೃಗಳಿಗೆ ತರ್ಪಣ, ಉಪವಾಸ, ಹೋಮ, ಜಪ, ದಾನಗಳಿಗೆ ಸಂತಸವೆನಿಸಿದ ಸಂಕ್ರಾಂತಿ ಎಂಬ ನಂಬಿಕೆಗಳಿವೆ.

ಆಯನವೆಂದರೆ ಸೂರ್ಯನು ಚಲಿಸುವ ಮಾರ್ಗವಾಗಿದ್ದು, ಸೂರ್ಯನು ಕರ್ಕಾಯನ ಬಿಂದು (ಜೂನ್ 21 ರಿಂದ) ದಕ್ಷಿಣದತ್ತ ವಾಲಿ ಚಲಿಸುತ್ತಿದ್ದು, ಮಕರ ಸಂಕ್ರಾಂತ್ರಿಯೆಂದು ಮಕರಾಯನ ಬಿಂದು (ಡಿಸೆಂಬರ್ 21) ಮುಟ್ಟಿ ತನ್ನ ಮಾರ್ಗವನ್ನು ಬದಲಾಯಿಸಿ, ಉತ್ತರದ ಕಡೆ ವಾಲಿ ಚಲಿಸುತ್ತಾನೆಂಬುದು ಈ ಹಬ್ಬದ ಖಗೋಳ ವೈಶಿಷ್ಟ್ಯತೆಯ ಸಂಕೇತವೇ ಆಗಿದೆ. ಸೂರ್ಯನ ಚಲನೆಯ ಬದಲಾವಣೆಯ ಮಹತ್ವ ಪಡೆದ ಈ ಸಂಕ್ರಾಂತಿ ಖಗೋಳಾಸಕ್ತರಿಗೆ ನೆರಳು-ಬೆಳಕುಗಳನ್ನು ಅಧ್ಯಯನ ಮಾಡುವವರಿಗೆ ಸಂಭ್ರಮವೇ ಸರಿ. ಇನ್ನು ಹಗಲು ಹೆಚ್ಚಾಗಿ, ರಾತ್ರಿಯ ಅವಧಿ ಕಡಿಮೆಯಾಗುವುದನ್ನೂ ಗಮನಿಸಬಹುದು.

"ದೇವತೆಗಳಿಗೆ ಹಗಲು, ರಾಕ್ಷಸರಿಗೆ ರಾತ್ರಿ ಪ್ರಾರಂಭವೆಂಬ ನಂಬಿಕೆ ಪುರಾಣಗಳಲ್ಲಿನ ನಂಬಿಕೆಯಾಗಿದೆ. ದಕ್ಷಿಣಾಯನದಲ್ಲಿ ಮುಚ್ಚಿದ ಸ್ವರ್ಗದ ಬಾಗಿಲು, ಈ ಉತ್ತರಾಯಣದಲ್ಲಿ ತೆರೆಯುತ್ತದೆ ಎಂಬು ನಂಬಿಕೆಯೂ ಹಲವು ಪುರಾಣಗಳಲ್ಲಿದೆ.

ಈ ದಿನ ಶ್ರೀರಾಮ ರಾವಣನನ್ನು ಸಂಹರಿಸಿ ಸೀತೆಯನ್ನು ತಂದ ದಿನವೆಂದು ಹೇಳುವ ಪದ್ಧತಿ ಹಲವರದು. ಮಹಾಭಾರತದ ಕಥೆಯಲ್ಲಿ ಇಚ್ಛಾಮರಣಿಯಾದ ಭೀಷ್ಮರು ಪ್ರಾಣ ಬಿಡಲು ಉತ್ತರಾಯಣ ಪರ್ವಕಾಲಕ್ಕಾಗಿ ಕಾದಿದ್ದರು ಎಂಬ ಉಲ್ಲೇಖವೂ ಇದೆ.

**ವಿವಿಧ ರಾಜ್ಯಗಳಲ್ಲಿ ಸಂಕ್ರಾಂತಿ ಆಚರಣೆ :** ಸಂಕ್ರಾಂತಿಯನ್ನು ಮುಖ್ಯವಾಗಿ ದಕ್ಷಿಣ ಭಾರತದ ಕರ್ನಾಟಕ, ಆಂಧ್ರ ಪ್ರದೇಶ, ತಮಿಳು ನಾಡು ಮತ್ತು ಕೇರಳಗಳಲ್ಲಿ ಆಚರಿಸಲಾಗುತ್ತದೆ. ಬೆಳೆಗಳು ಕಟಾವಿಗೆ ಬಂದು, ಧಾನ್ಯಲಕ್ಷ್ಮಿಯನ್ನು ಮನೆಗೆ ಬರುವ ಈ ಸುಗ್ಗಿ ಸಂದರ್ಭದಲ್ಲಿ ಆಚರಿಸ ಲಾಗುವ ಸಂಕ್ರಾಂತಿ ಹಬ್ಬ ಒಂದು ರೀತಿಯ ಸಮೃದ್ಧಿಯ ಸಂಕೇತವೇ ಆಗಿದೆ. ಭಾರತದೆಲ್ಲೆಡೆ ಈ ಸಂಕ್ರಾಂತಿಯ ಆಚರಣೆಗಳು ವಿಭಿನ್ನವಾಗಿವೆ. ಈ ಸಂಕ್ರಾಂತಿಯಲ್ಲಿ ಹಲವಾರು ಧಾರ್ಮಿಕ ಆಚರಣೆಗಳು ನಡೆದರೂ, ಖಗೋಳದ ಮಹತ್ವ ಪಡೆದಿರುವುದಕ್ಕೆ ವಿಶೇಷ ವೈಜ್ಞಾನಿಕ ಹಬ್ಬವೇ ಆಗಿದೆ.



ತಮಿಳು ನಾಡಿನಲ್ಲಿ ಪೊಂಗಲ್, ಪಂಜಾಬ್‌ನಲ್ಲಿ ಮಾಗೀ ಎಂದು ಇನ್ನೂ ಬೇರೆ ಬೇರೆ ರಾಜ್ಯಗಳಲ್ಲಿ ಮಾಘ, ಮೇಳ, ಭೋಗಿ ಎಂಬ ಹೆಸರುಗಳಿಂದಲೂ ಆಚರಿಸುತ್ತಾರೆ. ಮಕರ ಸಂಕ್ರಾಂತಿ ಹಬ್ಬವೆಂದು ಕರ್ನಾಟಕದಲ್ಲಿ ನಾವು ಆಚರಿಸಿದರೆ, ಗುಜರಾತ್‌ನಲ್ಲಿ ಉತ್ತರಾಯಣ್, ಪಂಜಾಬ್‌ನಲ್ಲಿ ಲೋರಿ, ಪಶ್ಚಿಮ ಬಂಗಾಳದಲ್ಲಿ ಪೌಶ್ ಸಂಕ್ರಾಂತಿ, ಓಡಿಸ್ಸಾದಲ್ಲಿ ಮಕರ ಚೌಲಾ, ಮಹಾರಾಷ್ಟ್ರ ಮತ್ತು ಹರಿಯಾಣಗಳಲ್ಲಿ ಮಾಗಿ ಸಂಕ್ರಾಂತಿ, ಅಸ್ಸಾಂನಲ್ಲಿ ಭೋಗಾಲಿ ಬಿಹು, ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಕಿಚಡಿ ಪರ್ವ್... ಹೀಗೆ ವಿವಿಧ ಹೆಸರುಗಳಿಂದಲೂ ಭಾರತದಾದ್ಯಂತ ವಿಭಿನ್ನವಾಗಿ ಆಚರಿಸುವ ಹಬ್ಬ ಈ ಸಂಕ್ರಾಂತಿಯಾಗಿದೆ. ಗಾಳಿಪಟ ಹಾರಿಸುವುದು, ಪವಿತ್ರ ನದಿಗಳಲ್ಲಿ ಸ್ನಾನ ಮಾಡುವುದು, ದಾನಗಳನ್ನು ನೀಡುವುದು, ಎತ್ತುಗಳನ್ನು ಓಡಿಸುವ ಸ್ಪರ್ಧೆಗಳು ಹೀಗೆ ವಿವಿಧ ಆಚರಣೆಗಳು ಈ ಸಂಕ್ರಾಂತಿ ಹಬ್ಬದ ವಿಶೇಷಗಳಾಗಿವೆ.

**ಸೂರ್ಯನ ಉತ್ತರಾಯಣ ಚಲನೆಯ ವೈಜ್ಞಾನಿಕ ವಿವರಣೆ :** ನಮ್ಮ ಭೂಮಿಯು ಸೂರ್ಯನ ಸುತ್ತ 365 1/4 ದಿನಗಳಿಗೊಮ್ಮೆ ಸುತ್ತುತ್ತಿರುವುದು ನಮಗೆ ಗೊತ್ತೇ ಇದೆ. ಆದರೆ ಭೂಮಿಯ ಮೇಲೆ ನಿಂತು ಸೂರ್ಯನ ಚಲನೆಯನ್ನು ನೋಡುವ ವೀಕ್ಷಕನಿಗೆ, ಸೂರ್ಯನೇ ಭೂಮಿಯ ಸುತ್ತಾ ಸುತ್ತುತ್ತಿರುವಂತೆ ಭಾಸವಾಗುತ್ತದೆ. ಸೂರ್ಯನ ಸುತ್ತಲಿನ ಭೂಕಕ್ಷೆಯನ್ನು ನಾವು ಕಾಲ್ಪನಿಕವಾಗಿ ಖಗೋಳವನ್ನು ಮುಟ್ಟುವವರೆಗೆ ವಿಸ್ತರಿಸೋಣ. ಆಗ ದೊರೆಯುವು ವೃತ್ತವನ್ನು ಕ್ರಾಂತಿ ವೃತ್ತ (Ecliptic) ಎಂದು ಕರೆಯುತ್ತೇವೆ. ನಮ್ಮ ಸೂರ್ಯನ ತೋರಿಕೆಯ ವಾರ್ಷಿಕ ಚಲನೆಯ ಮಾರ್ಗ ಈ ಕ್ರಾಂತಿ ವೃತ್ತವೇ ಆಗಿದೆ.

ಭೂಮಿಯ ಭ್ರಮಣೆಯ ಅಕ್ಷ, ಸೂರ್ಯನ ಸುತ್ತಲಿನ ಕಕ್ಷೆಯ ಸಮತಲಕ್ಕೆ ಲಂಬವಾಗಿರದೇ 23.5 ಡಿಗ್ರಿ ಓರೆಯಾಗಿದೆ. ಈ ಕಾರಣದಿಂದ ಕ್ರಾಂತಿ ವೃತ್ತವೂ, ಖಗೋಳೀಯ ವಿಷುವದ್ ವೃತ್ತಗೆ 23.5 ಡಿಗ್ರಿ ಓರೆಯಾಗಿದೆ.

ಈ ಎರಡೂ ವೃತ್ತಗಳನ್ನು ಛೇದಿಸುವ ಬಿಂದುಗಳನ್ನು ವಸಂತ ವಿಷುವ ಬಿಂದು (Vernal Equinox) ಮತ್ತು ಶರದ್ವಿಷುವ ಬಿಂದು (Autumnal Equinox) ಎಂದು ಕರೆಯುತ್ತೇವೆ.

ಹಾಗೆಯೇ ಈ ಎರಡೂ ವೃತ್ತಗಳ ಮಧ್ಯದ ಅಂತರ ಗರಿಷ್ಟ ಪ್ರಮಾಣವನ್ನು ಮುಟ್ಟುವ ಎರಡು ಬಿಂದುಗಳನ್ನು ಕರ್ಕಾಯನ ಬಿಂದು (Summer Solstice) ಮತ್ತು ಮಕರಾಯನ ಬಿಂದು (winter Solstice) ಎಂದೂ ಕರೆಯುತ್ತೇವೆ.

ಸೂರ್ಯ ಮಾರ್ಚ್ 21ರಂದು ವಸಂತ ವಿಷುವ ಬಿಂದುವಿಗೂ, ಸೆಪ್ಟಂಬರ್ 23ರಂದು ಶರದ್ವಿಷುವ ಬಿಂದುವಿಗೂ ಬರುತ್ತಾನೆ. ಈ ಎರಡೂ ದಿನಗಳು ಮಾತ್ರ ಹಗಲು ಮತ್ತು ಇರುಳಿನ ಅವಧಿ ಸಮವಾಗಿರುತ್ತದೆ. ಅಂದರೆ 12 ಗಂಟೆಗಳಾಗಿ ಹಂಚಿಕೊಳ್ಳುತ್ತವೆ. ವರ್ಷದ ಉಳಿದ ದಿನಗಳಲ್ಲಿ ಹಗಲು ಮತ್ತು ಇರುಳುಗಳ ಪಾಲು ಸಮವಾಗಿರುವುದಿಲ್ಲ. ಇದಲ್ಲದೇ ಸೂರ್ಯನು ಜೂನ್ 21ರಂದು ಕರ್ಕಾಯನ ಬಿಂದುವಿಗೂ ಮತ್ತು ಡಿಸೆಂಬರ್ 21ರಂದು ಮಕರಾಯನ ಬಿಂದುವಿಗೂ ಬರುತ್ತಾನೆ.

ಕರ್ಕಾಯನ ಬಿಂದುವಿನಿಂದ, ಮಕರಾಯನ ಬಿಂದುವಿನ ಕಡೆಗೆ, ದಕ್ಷಿಣ ದಿಕ್ಕಿನ ಸೂರ್ಯನ ಚಲನೆಯನ್ನು ಮತ್ತು ಕಾಲವನ್ನು ದಕ್ಷಿಣಾಯನ ಕಾಲವೆಂದೂ, ಮಕರಾಯನ ಬಿಂದುವಿನಿಂದ ಕರ್ಕಾಯನ ಬಿಂದುವಿನ ಕಡೆಗಿನ ಉತ್ತರ ದಿಕ್ಕಿನ ಚಲನೆಯ ಕಾಲವನ್ನು ಉತ್ತರಾಯಣ ಕಾಲವೆಂದು ಕರೆಯುತ್ತೇವೆ. ಹಾಗಾದರೆ ಸೂರ್ಯ ತನ್ನ ದಕ್ಷಿಣ ದಿಕ್ಕಿನ ಚಲನೆಯನ್ನು ಮುಗಿಸಿ, ಉತ್ತರ ದಿಕ್ಕಿನ ಕಡೆಗಿನ ಚಲನೆಯನ್ನು ಡಿಸೆಂಬರ್ 21 ರಿಂದಲೇ ಆರಂಭಿಸಿದ್ದಾನೆ. ಅಂದರೆ ಮಕರ ಸಂಕ್ರಾಂತಿಯ ಕಾಲ ಆಗಲೇ ಆರಂಭವಾಗಿದೆ.

ಆದರೆ ಗ್ರೆಗೋರಿಯನ್ ಪಂಚಾಂಗದ ಪ್ರಕಾರ ಈ ದಿನ ಜನವರಿ 14ರಂದು ಆಗಿರುವುದರಿಂದ, ಸಂಕ್ರಾಂತಿ ಹಬ್ಬವನ್ನು ಜನವರಿ 14ರಂದು ಆಚರಿಸುತ್ತೇವೆ. ವೈಜ್ಞಾನಿಕವಾಗಿ, ವಾಸ್ತವವಾಗಿ ಡಿಸೆಂಬರ್ 21 ರಿಂದಲೇ ಸೂರ್ಯ, ದಕ್ಷಿಣ ದಿಕ್ಕಿನ ಪಯಣದ ಅಂಚಲ್ಲಿ ನಿಂತು, ಉತ್ತರ ದಿಕ್ಕಿನೆಡೆಗೆ ಸಂಚಾರ ಆರಂಭಿಸಿದ್ದಾನೆನ್ನುವ ಸತ್ಯ ಈ ಸಂಕ್ರಾಂತಿಯ ಸಂಭ್ರಮದಂದು ನಾವು ತಿಳಿದುಕೊಳ್ಳಲೆಂಬುದು ನನ್ನ ಆಶಯ. ಉತ್ತರ ದಿಕ್ಕಿನೆಡೆಗೆ ಬೀಳುವ ವಸ್ತುಗಳ ನೆರಳೂ ಕ್ರಮೇಣ ಕಡಿಮೆಯಾಗಿ ದಕ್ಷಿಣ ದಿಕ್ಕಿನೆಡೆಗೆ ವಸ್ತುಗಳ ನೆರಳು ಹೆಚ್ಚಾಗಿ ಬೀಳುವುದನ್ನು ಅಧ್ಯಯನ ಮಾಡಿ ಅರಿಯಬಹುದಾಗಿದೆ.

ಖಗೋಳೀಯ ಮಹತ್ವದ ಈ ಸಂಕ್ರಾಂತಿ ಎಳ್ಳು-ಬೆಲ್ಲದೊಂದಿಗೆ ನಮ್ಮೆಲ್ಲಾ ತೊಂದರೆಗಳನ್ನು ಕಡಿಮೆ ಮಾಡಿ, ನೆಮ್ಮದಿ ಉಕ್ಕಿಸಲಿ.

**- ಹರೋನಹಳ್ಳಿ ಸ್ವಾಮಿ,**
ಅಧ್ಯಾಪಕರು
ಹವ್ಯಾಸಿ ಖಗೋಳ ವೀಕ್ಷಕರು,
ಭದ್ರಾವತಿ.

haronahalliswamy@gmail.com

## ಗ್ರಾಮಾಂತರದಲ್ಲಿ ಮನೆಗಳ್ಳತನ

ದಾವಣಗೆರೆ, ಜ.13- ಇಲ್ಲಿನ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಂದು ಮತ್ತೊಂದು ಮನೆಗಳ್ಳತನ ನಡೆದಿದ್ದು, 1.50 ಲಕ್ಷ ನಗದು ಹಾಗೂ 45 ಸಾವಿರ ಮೌಲ್ಯದ ಚಿನ್ನಾಭರಣಗಳು ಕಳುವಾಗಿವೆ.

ತಾಲ್ಲೂಕಿನ ಬಿ. ಚಿತ್ತಾನಹಳ್ಳಿ ಗ್ರಾಮದ ಸಿದ್ದಪ್ಪ ಎಂಬುವರು ತಮ್ಮ ಮನೆಗೆ ಬೀಗ ಹಾಕಿ ಹೋಟೆಲ್ ಕೆಲಸಕ್ಕೆ ಹೋದಾಗ ಕಳ್ಳತನ ನಡೆದಿದೆ.

ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಂಗಳವಾರವೂ ಬಸವನಾಳ್ ಗೊಲ್ಲರಹಟ್ಟಿ ಗ್ರಾಮದಲ್ಲಿ ಹಾಡಹಗಲೆ ಮಲ್ಲೇಶ್ ನಾಯ್ಕ ಎಂಬ ಶಿಕ್ಷಕರ ಮನೆಯಲ್ಲಿದ್ದ 2.03 ಲಕ್ಷ ರೂ . ಮೌಲ್ಯದ ಚಿನ್ನಾಭರಣ, ನಗದು ಕಳ್ಳತನ ಮಾಡಲಾಗಿತ್ತು.

## ನಗರದಲ್ಲಿ ನಾಳೆ ಸ್ವ ಉದ್ಯೋಗ ತರಬೇತಿ

ದಾವಣಗೆರೆ, ಜ.13 - ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 15 ರಿಂದ ನಗರದ ರೇಷ್ಮೆ ಇಲಾಖೆ ಆವರಣದಲ್ಲಿ ಮಹಿಳೆಯರಿಗೆ ಹೊಲಿಗೆ ತರಬೇತಿ, ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ಸಾಕಾಣಿಕೆ, ಸಣ್ಣ ಉದ್ದಿಮೆದಾರರಿಗೆ ಉದ್ಯಮ ಶೀಲತಾ ತರಬೇತಿ ನಡೆಯಲಿದೆ. ಸ್ವ ಉದ್ಯೋಗ ಮಾಡಲು ಇಚ್ಛಿಸುವ 18 ರಿಂದ 45 ವಯೋಮಿತಿಯ ಗ್ರಾಮೀಣ ಬಿಪಿಎಲ್ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ವಿವರಕ್ಕೆ ಸಂಪರ್ಕಿಸಿ : ಮೊ: 9481977076, 7259731172.

## ಸಂಪುಟ ಸದಸ್ಯರಿಗೆ ಬಿಜೆಪಿ ಹೈಕಮಾಂಡ್ ಆಘಾತ

ಬೆಂಗಳೂರು, ಜ. 13- ಸಂಪುಟ ವಿಸ್ತರಣೆ ಮಾತ್ರವೆಂದು ನಿಟ್ಟುಸಿರು ಬಿಟ್ಟಿದ್ದ ರಾಜ್ಯ ಸಚಿವ ಸಂಪುಟದ ಸದಸ್ಯರಿಗೆ ಬಿಜೆಪಿ ಹೈಕಮಾಂಡ್ ಆಘಾತ ನೀಡಿದೆ. ಸಂಪುಟ ವಿಸ್ತರಣೆ ಬಳಿಕ ಸಚಿವರ ಖಾತೆ ಬದಲಾವಣೆ ಮಾಡಲು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದೆ.

ವಿಸ್ತರಣೆ ಬಳಿಕ ತಮ್ಮ ಬಳಿ ಇರುವ ಖಾತೆಗಳನ್ನು ಹಂಚುವುದರೊಂದಿಗೆ ಹಲವು ಸಚಿವರ ಖಾತೆ ಬದಲಾವಣೆಗೂ ಮುಖ್ಯಮಂತ್ರಿ ಯಡಿಯೂರಪ್ಪ ತೀರ್ಮಾನಿಸಿದ್ದು, ಪ್ರಮುಖವಾಗಿ ಹಿರಿಯ ಸಚಿವರ ಖಾತೆಗಳನ್ನು ಬದಲಾಯಿಸುವ ಲೆಕ್ಕಾಚಾರ ಹಾಕಿಕೊಂಡಿದ್ದಾರೆ ಎನ್ನಲಾಗಿದೆ.

ಬಿಜೆಪಿ ಸರ್ಕಾರ ರಚನೆಯಲ್ಲಿ ಕೈ ಜೋಡಿಸಿದವರಿಗೆ ಬಯಸಿದ ಖಾತೆಗಳನ್ನು ನೀಡುವುದು ಹಾಗೂ ಹಾಲಿ ಸಚಿವರಲ್ಲಿ ಕೆಲವರಿಗೆ ಹಂಚಿಕೆ ಮಾಡಲಾಗಿರುವ ಖಾತೆಗಳನ್ನು ಬದಲಾವಣೆ ಮಾಡುವ ನಿರ್ಧಾರ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ.

ಹಲವು ಸಚಿವರು ತಮ್ಮ ಖಾತೆಗಳ ಬದಲಾವಣೆಗೆ ಬೇಡಿಕೆ ಇಟ್ಟಿರುವುದು ಕೂಡ ಯಡಿಯೂರಪ್ಪನವರು ಈ ನಿರ್ಧಾರಕ್ಕೆ ಬರಲು ಕಾರಣ.

ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಅವರು ಗೃಹ ಇಲಾಖೆ ಬದಲು ಜಲಸಂಪನ್ಮೂಲ ಖಾತೆಗೆ ಬೇಡಿಕೆ ಇಟ್ಟಿದ್ದಾರೆ. ಹಿಂದೆ ಜಲಸಂಪನ್ಮೂಲ ಸಚಿವರಾಗಿ ಅವರು ಖಾತೆ ನಿರ್ವಹಿಸಿದ್ದರು. ಆದರೆ, ಯಡಿಯೂರಪ್ಪ ಅವರು ರಮೇಶ್ ಜಾರಕಿಹೊಳಿ ಅವರಿಗೆ ಪಕ್ಷ ಸೇರ್ಪಡೆ ಸಂದರ್ಭದಲ್ಲಿಯೇ ಜಲ ಸಂಪನ್ಮೂಲ ಇಲಾಖೆ ನೀಡುವುದಾಗಿ ಭರವಸೆ ನೀಡಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದರು.

ಜಲ ಸಂಪನ್ಮೂಲ ಖಾತೆ ಬಸವರಾಜ್ ಬೊಮ್ಮಾಯಿ ಅವರ ಕೈ ತಪ್ಪಿದೆ. ಈಗ ಯಡಿಯೂರಪ್ಪ, ಬೊಮ್ಮಾಯಿ ಅವರ ಗೃಹ ಖಾತೆ ಬದಲಿಸಿ, ಕಂದಾಯ ಇಲಾಖೆ ನೀಡುವ ಆಲೋಚನೆಯಲ್ಲಿದ್ದಾರೆ ಎನ್ನಲಾಗುತ್ತಿದೆ.

ಇನ್ನು ಕಂದಾಯ ಸಚಿವ ಅಶೋಕ್ ಅವರಿಗೆ ಮತ್ತೆ ಗೃಹ ಇಲಾಖೆ ಕೊಡುವ ಆಲೋಚನೆ ಹೊಂದಿದ್ದಾರೆ. ಆದರೆ ಮೊದಲಿನಿಂದಲೂ ಆರ್. ಅಶೋಕ್ ಬೆಂಗಳೂರು ಅಭಿವೃದ್ಧಿ ಖಾತೆಗೆ ಪಟ್ಟು ಹಿಡಿದಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರಿಗೆ ಇಂಧನ ಖಾತೆ ನೀಡುವ ಬಗ್ಗೆ ಸಿಎಂ ಒಲವು ಹೊಂದಿದ್ದಾರೆ. ಈಶ್ವರಪ್ಪ ಅವರ ಬಳಿ ಇರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅವರಿಗೆ ನೀಡುವ ಆಲೋಚನೆಯನ್ನು ಹೊಂದಿದ್ದಾರೆ.

ಸಂಪುಟ ವಿಸ್ತರಣೆಯ ನಂತರ ಸಚಿವ ಸುಧಾಕರ್ ಬಳಿ ಇರುವ ವೈದ್ಯಕೀಯ ಶಿಕ್ಷಣ ಖಾತೆ ಹಾಗೂ ಶಿವರಾಮ್ ಹೆಬ್ಬಾರ್ ಬಳಿ ಇರುವ ಸಕ್ಕರೆ ಖಾತೆಯನ್ನು ವಾಪಸ್ ಪಡೆದು ನೂತನ ಸಚಿವರಿಗೆ ಹಂಚಿಕೆ ಮಾಡಲು ಯಡಿಯೂರಪ್ಪ ಅವರು ಚಿಂತನೆ ನಡೆಸಿದ್ದಾರೆ.

## ಮಾವು : ಸಸ್ಯ ಸಂರಕ್ಷಣಾ ಕ್ರಮಗಳು

ದಾವಣಗೆರೆ, ಜ.13- ಮಾವು ಹೂ ಬಿಡುವ ಸಮಯದಲ್ಲಿ ಅಕಾಲಿಕ ಮಳೆ ಬಿದ್ದಿರುವ ಕಾರಣ ಸಂಭವನೀಯ ಹೂ ತೆನೆ ಕಪ್ಪಾಗುವ ಹಾಗೂ ಬೂದಿ ರೋಗಗಳನ್ನು ತಡೆಗಟ್ಟಲು ಹೆಕ್ಸಾಕೊನಜೋಲ್ 2 ಮಿ.ಲೀ ಅಥವಾ ಥಯೋಫಿನೇಟ್ ಮಿಥೈಲ್ 1 ಗ್ರಾಂ ಅಥವಾ ಕಾರ್ಬನ್‌ಡೈಜಿಮ್ 1.5 ಗ್ರಾಂ ಅಥವಾ ಟ್ರಸಕ್ಲೊಜೋಲ್ 0.25 ಗ್ರಾಂ/ಪ್ರತಿ ಲೀಟರ್ ನೀರಲ್ಲಿ ಬೆರೆಸಿ ಸಿಂಪಡಿಸುವುದು.

**ಜಿಗಿ ಹುಳು:** ಮೋಡ ಕವಿದ ವಾತಾವರಣದಲ್ಲಿ ಜಿಗಿ ಹುಳುಗಳ ಬಾಧೆ ಕಂಡುಬಂದಲ್ಲಿ ತಡೆಗಟ್ಟಲು ರೈತರು ಇಮಿಡಾ ಕ್ಲೋಪ್ರಿಡ್ ಶೇ.17.8 ಎಸ್.ಎಲ್-0.5 ಮಿ.ಲೀ ಅಥವಾ ಫ್ಯೂಪ್ರೊನಿಲ್ 1.5 ಮಿ.ಲೀ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಅಥವಾ ಸಹಾಯಕ ತೋಟಗಾರಿಕೆ ಅಧಿಕಾರಿಯವರನ್ನು ಅಥವಾ ಹಾರ್ಟಿಕ್ಲಿನಿಕ್ ವಿಷಯ ತಜ್ಞರು, ದಾವಣಗೆರೆ ಇವರನ್ನು ಸಂಪರ್ಕಿಸಬಹುದೆಂದು ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

## ನಗರದಲ್ಲಿಂದು ಯೋಗಾಸನ ತರಬೇತಿ

ಆಚಾರ್ಯ ಯೋಗ ವಿದ್ಯಾಶಾಲೆ ವತಿಯಿಂದ ಉಚಿತ ಯೋಗಾಸನ ತರಬೇತಿ ಶಿಬಿರವು ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ ಇದೇ ದಿನಾಂಕ 17 ರವರೆಗೆ ನಡೆಯಲಿದೆ. ಯೋಗ ಶಿಕ್ಷಕ ಗೋಪಿನಾಥ್ ಅವರು ಶಿಬಿರವನ್ನು ನಡೆಸಿಕೊಡುವರು ಎಂದು ಪುಷ್ಪಾ (9036719573) ತಿಳಿಸಿದ್ದಾರೆ.

# 2ನೇ ವರ್ಷದ ಹರ ಜಾತ್ರಾ ಮಹೋತ್ಸವಕ್ಕೆ ಸಜ್ಜುಗೊಂಡ ಪಂಚಮಸಾಲಿ ಜಗದ್ಗುರು ಪೀಠ





ಜಿಗಳಿ ಪ್ರಕಾಶ್

**ಇಂದು-ನಾಳೆ ನಡೆಯಲಿರುವ ಜಾತ್ರೆಯಲ್ಲಿ ನಾಡಿನ ಮಠಾಧೀಶರು, ಮುಖ್ಯಮಂತ್ರಿಗಳು, ಸಚಿವರು, ಶಾಸಕರು, ಹೋರಾಟಗಾರರು ಸಾಧಕರು ಭಾಗವಹಿಸಲಿದ್ದಾರೆ.**

ಹರಿಹರ ಸಮೀಪ ಇರುವ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಇಂದು ಮತ್ತು ನಾಳೆ 2ನೇ ವರ್ಷದ ಹರ ಜಾತ್ರಾ ಮಹೋತ್ಸವ ಜರುಗಲಿದ್ದು, ಅದಕ್ಕಾಗಿ ಮಠ ನವ ವಧುವಿನಂತೆ ಸಿಂಗಾರಗೊಂಡಿದೆ.

ಜಾತ್ರೆಗಾಗಿ ಕೈಗೊಂಡಿದ್ದ ಎಲ್ಲಾ ಸಿದ್ದತೆಗಳಿಗೆ ಬುಧವಾರ ಸಂಜೆ ಅಂತಿಮ ರೂಪ ಕೊಡಲಾಯಿತು. ಶ್ರೀ ವಚನಾನಂದ ಸ್ವಾಮೀಜಿ ಅವರು ಖುದ್ದು ಹಾಜರಿದ್ದು, ಜಾತ್ರೆಯ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದಾರೆ.

ಮಠದ ಹಿರಿಯ ಜಗದ್ಗುರು ಡಾ. ಶ್ರೀ ಮಹಾಂತ ಶಿವಾಚಾರ್ಯ ಸ್ವಾಮೀಜಿ ಅವರು ಲಿಂಗೈಕ್ಯರಾದ ನಂತರ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿ ಪೀಠ ಹಾಗೂ ಸಮಾಜದ ಜವಾಬ್ದಾರಿ ವಹಿಸಿಕೊಂಡ ಶ್ವಾಸ ಗುರು ಎಂದೇ ಖ್ಯಾತಿ ಪಡೆದಿರುವ ಹಾಗೂ ಜಗತ್ತಿನ ಹಲವಾರು ದೇಶಗಳನ್ನು ಸುತ್ತಿ ವಿಶ್ವಾದ್ಯಂತ ಲಕ್ಷಾಂತರ ಯೋಗ ಶಿಷ್ಯರನ್ನು, ಅಭಿಮಾನಿಗಳನ್ನು ಹೊಂದಿರುವ ಶ್ರೀ ವಚನಾನಂದ ಸ್ವಾಮೀಜಿ ಅವರು ಪಂಚಮಸಾಲಿ ಸಮುದಾಯದ ಅಭಿವೃದ್ಧಿಗಾಗಿ ಹೊಸ ದೃಷ್ಟಿಕೋನ, ಹೊಸ ಹುರುಪು ಹಾಗೂ ನವ ಚೈತನ್ಯವನ್ನು ಹುಟ್ಟಿ ಹಾಕಿದ್ದಾರೆ. ಶ್ರೀಗಳು ಪೀಠ ಅಲಂಕರಿಸಿದ ನಂತರ ಮಠದಲ್ಲಿ ಒಂದು ಹೊಸ ಸಂಚಲನ ಮೂಡಿತು. ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಿ, ಹಲವು ಮಹತ್ವದ ಹೋರಾಟ, ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ರಾಜಕೀಯ ಪ್ರಾತಿನಿಧ್ಯಕ್ಕಾಗಿ ದನಿ ಎತ್ತಿದರು. ಪ್ರತಿ ವರ್ಷ ಜನವರಿ 14 ಮತ್ತು 15 ರ ಸಂಕ್ರಾಂತಿಯಂದು ಹರ ಜಾತ್ರಾ ಮಹೋತ್ಸವವನ್ನು ಆಚರಿಸಲು ಕಳೆದ ವರ್ಷದಿಂದ ಮುನ್ನಡಿ ಬರೆದರು. ಆ ಮೂಲಕ ಸಮು ದಾಯದಲ್ಲಿ ಒಗ್ಗಟ್ಟು ಪ್ರದರ್ಶಿಸಲು, ಅರಿತುಕೊಳ್ಳಲು, ಬೆರೆಯಲು, ದನಿ ಎತ್ತಲು ಹರ ಜಾತ್ರೆ ಒಂದು ವೇದಿಕೆಯಾಗಿ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದರು.

ಸಮುದಾಯದ ಪ್ರಮುಖ ಜಾತ್ರೆಯಾಗಿ ಹೊರಹೊಮ್ಮಿರುವ ಹರ ಜಾತ್ರೆಗಾಗಿ ಈ ವರ್ಷ ಜರ್ಮನಿ ಮಾದರಿಯಲ್ಲಿ 300x400 ಅಳತೆಯ ಸಭಾ ಮಂಟಪ ಮತ್ತು 30x80 ಅಳತೆಯ ಸುಸಜ್ಜಿತ ವೇದಿಕೆಯನ್ನು ಪೂರ್ವಮುಖವಾಗಿ ಹರ ಧ್ಯಾನ ಮಂದಿರದ ಮುಂಭಾಗದಲ್ಲಿ ಹಾಕಲಾಗಿದೆ.

ಸುಮಾರು 25 ಸಾವಿರ ಜನ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಮಾಡಲಾಗಿದ್ದು, ಕಾರ್ಯಕ್ರಮ ವೀಕ್ಷಣೆಗಾಗಿ 8 ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ. ಮಠದ ಹಿಂಭಾಗದಲ್ಲಿರುವ ವಿಶಾಲವಾದ ಜಾಗದಲ್ಲಿ ಸುಮಾರು 50 ಸಾವಿರ ಜನರಿಗೆ ಊಟದ ಹಾಗೂ ಕುಡಿಯುವ ಶುದ್ಧ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ.

ಜ. 14 ರ ಬೆಳಿಗ್ಗೆ ಉಪ್ಪಿಟ್ಟು, ಟೊಮ್ಯಾಟೋ ಬಾತ್ ಉಪಹಾರವಿದ್ದು, ಮಧ್ಯಾಹ್ನ ಹಾಗೂ ರಾತ್ರಿ ಲಾಡು, ಅನ್ನ-ಸಂಬಾರು, ಪಲ್ಯ ಊಟ ಇರುತ್ತದೆ. ಜ. 15 ರ ಬೆಳಿಗ್ಗೆ ಉಪ್ಪಿಟ್ಟು-ಕೇಸರಿ ಬಾತ್, ಮಧ್ಯಾಹ್ನ ರೊಟ್ಟಿ, ಲಾಡು, ಗೋಧಿ ಪಾಯಸ, ಅನ್ನ-ಸಾಂಬಾರು, ಪಲ್ಯ ಊಟದ ತಯಾರಿ ಮಾಡಲಾಗಿದೆ ಎಂದು ಪೀಠದ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್ 'ಜನತಾವಾಣಿ'ಗೆ ಮಾಹಿತಿ ನೀಡಿದರು.

**ಪಾರ್ಕಿಂಗ್ ವ್ಯವಸ್ಥೆ :** ಮಠದ ಸಮೀಪ 13 ಎಕರೆ ಜಾಗದಲ್ಲಿ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಿದ್ದು, ಎಲ್ಲಾ ಸ್ಥಳಗಳಲ್ಲಿ ಸೂಕ್ತ ನಿರ್ವಹಣೆಗಾಗಿ ಪೊಲೀಸ್ ಇಲಾಖೆಯ ಜೊತೆಗೆ ನಮ್ಮ ತಂಡಗಳನ್ನು ನೇಮಿಸಲಾಗಿದೆ ಎಂದರು.

**ಅಭಿವೃದ್ಧಿ ಪರ್ವ :** ಶ್ರೀಗಳು ಪೀಠದ ಅಧಿಕಾರ ವಹಿಸಿಕೊಂಡ ನಂತರ ಮಠದಲ್ಲಿ ಅಭಿವೃದ್ಧಿ ಪರ್ವ ಪ್ರಾರಂಭವಾಗಿದ್ದು, ಸರ್ಕಾರದ ವಿವಿಧ ಇಲಾಖೆಗಳಿಂದ ಅನುದಾನ ಪಡೆಯುವಲ್ಲಿ ಶ್ರೀಗಳು ಯಶಸ್ವಿಯಾಗಿದ್ದಾರೆ.

ಮಠದ ಒಳಗಡೆ ಸುಮಾರು 4 ಕೋಟಿ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ಹಾಗೂ 30 ಲಕ್ಷ ರೂ. ವೆಚ್ಚದಲ್ಲಿ ಹರ ದ್ವಾರ ನಿರ್ಮಿಸಲಾಗಿದೆ. 8 ಕೋಟಿ ರೂ. ವೆಚ್ಚದಲ್ಲಿ ಯಾತ್ರಿ ನಿವಾಸ, 4 ಕೋಟಿ ರೂ. ವೆಚ್ಚದಲ್ಲಿ ದಾಸೋಹ ಭವನ ಹಾಗೂ 2.80 ಕೋಟಿ ರೂ. ವೆಚ್ಚದಲ್ಲಿ ಮಠದ ಸುತ್ತಲು ತಡೆಗೋಡೆ ನಿರ್ಮಾಣ ಕಾಮಗಾರಿಗಳು ಭರದಿಂದ ಸಾಗಿವೆ.

ಸುಮಾರು 10 ಕೋಟಿ ರೂ. ವೆಚ್ಚದಲ್ಲಿ ಬೃಹತ್ ಧ್ಯಾನ ಮಂದಿರ ಹಾಗೂ ಸಮುದಾಯ ಭವನ ಮತ್ತು 3.50 ಕೋಟಿ **(4ನೇ ಪುಟಕ್ಕೆ)**

## ಮಾರ್ಗ ಬದಲು

ದಾವಣಗೆರೆ, ಜ.13- ಹರಿಹರದ ಹೊರ ವಲಯದಲ್ಲಿ ರುವ ಲಿಂಗಾಯತ ಪಂಚಮ ಸಾಲಿ ಶ್ರೀಮಠದಲ್ಲಿ ಗುರುವಾರ ನಡೆಯುತ್ತಿರುವ ಹರ ಜಾತ್ರೆ ಅಂಗವಾಗಿ ಸಂಚಾರ ದಟ್ಟಣೆ ನಿಯಂತ್ರಿಸಲು ಹರಿಹರ-ಶಿವಮೊಗ್ಗ ರಸ್ತೆಯ ಮಾರ್ಗದಲ್ಲಿ ಭಾರಿ ಹಾಗೂ ಲಘು ವಾಹನಗಳ ಸಂಚಾರ ಬದಲಾಯಿಸಲಾಗಿದೆ.

ಶಿವಮೊಗ್ಗ ಕಡೆಯಿಂದ ಮಲೇಬೆನ್ನೂರು ಮಾರ್ಗವಾಗಿ ಹರಿಹರಕ್ಕೆ ಬರುವ ವಾಹನಗಳು ಬೆಳ್ಳೂಡಿ ಕ್ರಾಸ್‌ನಿಂದ ಬಲಕ್ಕೆ ತಿರುಗಿ ಷಂಶೀಪುರಕ್ಕೆ ಹೋಗುವ ರಸ್ತೆ ಮಾರ್ಗವಾಗಿ ಹರಿಹರ ಶಿವಮೊಗ್ಗ ರಸ್ತೆಗೆ ಸೇರಿ ಹರಿಹರ ಕಡೆ ಹೋಗುವುದು.

ಹರಿಹರ ಕಡೆಯಿಂದ ಮಲೇಬೆನ್ನೂರು ಮಾರ್ಗವಾಗಿ ಶಿವಮೊಗ್ಗದ ಕಡೆಗೆ ಹೋಗುವ ವಾಹನಗಳು ಬನ್ನಿಕೋಡು-ಶಂಷೀಪುರ ಕ್ರಾಸ್‌ನಿಂದ ಎಡಕ್ಕೆ ತಿರುಗಿ ಬೆಳ್ಳೂಡಿ ಕ್ರಾಸ್‌ಗೆ ಬಂದು ಹರಿಹರ ಶಿವಮೊಗ್ಗ ರಸ್ತೆ ಸೇರಿ ಶಿವಮೊಗ್ಗದ ಕಡೆ ಹೋಗಬೇಕಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ. ಜೈ ಸಹಕಾರ

**ಜಂಗಮ ಸೌಹಾರ್ದ ಸಹಕಾರಿ ನಿಯಮಿತ**
16ನೇ ಕ್ರಾಸ್, ಕೆ.ಟಿ.ಜೆ. ನಗರ, ಹದಡಿ ರಸ್ತೆ, ದಾವಣಗೆರೆ-577 002.

ಮಾನ್ಯ ಮತದಾರ ಬಂಧುಗಳೇ, **"ಪಿ.ಜಿ. ರಾಜಶೇಖರ ಗ್ರೂಪ್"**

ಸಹಕಾರಿಯ ಉತ್ತಮ ಅಭಿವೃದ್ಧಿಗೆ, ಸದಸ್ಯ ಬಂಧುಗಳಿಗೆ ಪ್ರಮಾಣಿಕವಾಗಿ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಈ ಕೆಳಕಂಡ ನಾವುಗಳು ಅಭ್ಯರ್ಥಿಗಳಾಗಿ ಸಹಕಾರಿಯ ಉನ್ನತ ಪ್ರಗತಿಗಾಗಿ ಶ್ರಮಿಸಲು ಮಾಜಿ ಅಧ್ಯಕ್ಷರಾದ **"ಪಿ.ಜಿ. ರಾಜಶೇಖರ್ ಗ್ರೂಪ್"** ಇಂದ ಸ್ಪರ್ಧಿಸಿರುತ್ತೇವೆ. ತಮ್ಮ ಅತ್ಯಮೂಲ್ಯವಾದ ಮತವನ್ನು ಈ ಕೆಳಕಂಡ 10 ಅಭ್ಯರ್ಥಿಗಳಿಗೂ ತಲಾ 1 ರಂತೆ ಮತವನ್ನು ನೀಡಿ ನಮ್ಮೆಲ್ಲರನ್ನೂ ಜಯಶೀಲರನ್ನಾಗಿ ಮಾಡಿ ತಮ್ಮ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಗುರುತು |
|---|---|---|---|
| 14 | ರಾಜಶೇಖರಯ್ಯ ಪಿ.ಜಿ. ಸಾಮಾನ್ಯ | | |
| 4 | ಚನ್ನಬಸವಯ್ಯ ಕೆ.ಎಂ. ಸಾಮಾನ್ಯ | | |
| 9 | ದ್ರಾಕ್ಷಾಯಣಮ್ಮ ಮಹಿಳಾ ಮೀಸಲು | | |
| 16 | ವೀರಭದ್ರಯ್ಯ ಶಾಸ್ತ್ರಿ ಹೆಚ್. ಸಾಮಾನ್ಯ | | |
| 19 | ವೀರರಾಜೇಂದ್ರಸ್ವಾಮಿ ಬಿ.ಎಂ. ಸಾಮಾನ್ಯ | | |

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಗುರುತು |
|---|---|---|---|
| 21 | ಸುರೇಶ್ ಹೆಚ್.ಪಿ. ಸಾಮಾನ್ಯ | | |
| 5 | ಚಂದ್ರಮ್ಮ ಕೆ.ಎಂ. ಮಹಿಳಾ ಮೀಸಲು | | |
| 3 | ಕಿರಣಕುಮಾರ್ ಜೆ. ಸಾಮಾನ್ಯ | | |
| 20 | ಸಿದ್ದಯ್ಯ ಎಂ.ಎಸ್. (ಸಿದ್ದೇಶ್ ಕೋಟೆಹಾಳ್) ಸಾಮಾನ್ಯ | | |
| 1 | ಅರುಣಕುಮಾರ್ ಜೆ.ಕೆ. ಸಾಮಾನ್ಯ | | |

ದಿನಾಂಕ : 17–1–2021ನೇ ಭಾನುವಾರ
ಸಮಯ : ಬೆಳಿಗ್ಗೆ 9–00 ರಿಂದ ಸಂಜೆ 4–00ರ ವರೆಗೆ
ಸ್ಥಳ : **ಸದ್ಯೋಜಾತ ಸ್ವಾಮಿಗಳ ಮಠ, 'ಶಿವಾಚಾರ್ಯ ನಿಕೇತನ'**
ಎಂ.ಸಿ.ಸಿ. 'ಬಿ' ಬ್ಲಾಕ್, ಶಾಮನೂರು ರಸ್ತೆ, ದಾವಣಗೆರೆ.

ವಿಶೇಷ ಸೂಚನೆ : ಮತದಾನಕ್ಕೆ ಬರುವಾಗ ಸಹಕಾರಿಯ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡ್ ತರಲು ಕೋರಿದೆ.

ಸಂಪರ್ಕಕ್ಕಾಗಿ
9481875554, 9341127879, 9448443095.



ಎಸ್.ಎಂ. ಗುರುದೇವಮೂರ್ತಿ
ಸಂಸ್ಥಾಪಕರು

ಸ್ವಚ್ಛ, ದಕ್ಷ, ಪಾರದರ್ಶಕ, ಆಡಳಿತ ಮತ್ತು ಅಭಿವೃದ್ಧಿಗೆ ನಿಮ್ಮ ಮತ

**ಸಹಕಾರಿಯ ಷೇರುದಾರರಲ್ಲಿ ಮನವಿ**

ದಿನಾಂಕ : 17.01.2021ರ ಭಾನುವಾರ ನಡೆಯಲಿರುವ ಜಂಗಮ ಸೌಹಾರ್ದ ಸಹಕಾರಿ ನಿಯಮಿತದ ನಿರ್ದೇಶಕ ಸ್ಥಾನಗಳಿಗೆ ಸ್ಪರ್ಧಿಸಿರುವ ಶ್ರೀ ಪಿ.ಜಿ. ರಾಜಶೇಖರ್ ಅವರ ನೇತೃತ್ವದ ಗುಂಪನ್ನು ಬೆಂಬಲಿಸುತ್ತೇವೆ. ಚುನಾವಣೆಯಲ್ಲಿ **ಶ್ರೀ ಪಿ.ಜಿ. ರಾಜಶೇಖರ್** ನೇತೃತ್ವದ ಗುಂಪಿನ ಎಲ್ಲಾ 10 ಜನ ಅಭ್ಯರ್ಥಿಗಳಿಗೆ ಮಾನ್ಯ ಅರ್ಹ ಷೇರುದಾರರು ತಮ್ಮ ಮತವನ್ನು ಚಲಾಯಿಸುವ ಮೂಲಕ ಅವರನ್ನು ಚುನಾಯಿಸುವುದರೊಂದಿಗೆ ನಮ್ಮ ಸಹಕಾರಿಯ ಶ್ರೇಯೋಭಿವೃದ್ಧಿಗೆ ಸಹಕಾರ ನೀಡುವಂತೆ ಕೋರುತ್ತೇವೆ.



ಡಿ.ಸಿ. ಚಂದ್ರಯ್ಯ
ಸಂಸ್ಥಾಪಕರು

# ಹರ ಜಾತ್ರೆಗೆ ಸಜ್ಜುಗೊಂಡ ಪಂಚಮಸಾಲಿ ಪೀಠ




**(3ನೇ ಪುಟದಿಂದ)** ರೂ. ವೆಚ್ಚದಲ್ಲಿ ಪುಷ್ಕರಣಿ ನಿರ್ಮಿಸುವ ಯೋಜನೆಯನ್ನು ಶ್ರೀಗಳು ಹೊಂದಿದ್ದು, ಶೀಘ್ರವೇ ಕಾಮಗಾರಿಗೆ ಚಾಲನೆ ನೀಡಲಾಗುವುದೆಂದು ಚಂದ್ರಶೇಖರ್ ಪೂಜಾರ್ ತಿಳಿಸಿದರು.

ಹರ ಜಾತ್ರೆಯ ಕಾರ್ಯಕ್ರಮಗಳು ಇಂದು ಗುರುವಾರ ಬೆಳಿಗ್ಗೆ ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ ಹರದ್ವಾರ ಉದ್ಘಾಟಿಸಲಿದ್ದಾರೆ. ಸಿಎಂ ಬಿ.ಎಸ್. ಯಡಿಯೂರಪ್ಪನವರು ಸಂಕ್ರಾಂತಿ ಸಂಭ್ರಮ ಉದ್ಘಾಟಿಸಲಿದ್ದು, ಮಹಾರಾಷ್ಟ್ರದ ನಿಕಟಪೂರ್ವ ಮುಖ್ಯಮಂತ್ರಿ ಸ್ವಾವಲಂಬಿ ಸಮಾವೇಶ ಉದ್ಘಾಟಿಸಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ಭೂ ತಪಸ್ವಿ ಸಮಾವೇಶ ನಡೆಯಲಿದ್ದು, ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ, ಶಾಸಕರೂ ಆದ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಇಳಕಲ್ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಶ್ರೀ ಗುರುಮಹಾಂತ ಶಿವಯೋಗಿಗಳು, ಹಾವೇರಿ ಹುಕ್ಕೇರಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ಜಾತ್ರಾ ಸಮಿತಿ ಅಧ್ಯಕ್ಷ ಬಿ. ಲೋಕೇಶ್, ಹಿರಿಯರಾದ ಸಿರಿಗೆರೆ ನಾಗನಗೌಡ್ರು, ಪೀಠದ ಉತ್ಸಾಹಿ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್ ಮತ್ತು ಗುತ್ತೂರು ಕರಿಬಸಪ್ಪ ಸೇರಿದಂತೆ ಇನ್ನೂ ಅನೇಕರು ಜಾತ್ರೆ ಯಶಸ್ಸಿಗಾಗಿ ಶ್ರಮ ವಹಿಸಿದ್ದಾರೆ.

**ಪ್ರಮುಖ ಆಕರ್ಷಣೆ :** ಮಠದ ಪ್ರವೇಶ ದ್ವಾರದಲ್ಲಿ ನಿರ್ಮಿಸಿರುವ "ಹೊನ್ನ ಬಿತ್ತೇವು ಹೊಲಕೆಲ್ಲ'' ಎಂಬ ರೈತ ಬದುಕಿನ ಕೃಷಿ ಸಂದೇಶ ಸಾರುವ ಕಲಾಕೃತಿ ಈ ವರ್ಷದ ಜಾತ್ರೆಯಲ್ಲಿ ಪ್ರಮುಖ ಆಕರ್ಷಣೆ ಆಗಲಿದೆ.

**ಕಳಸಾರೋಹಣ :** ಮಠದಲ್ಲಿ ನೂತನವಾಗಿ ನಿರ್ಮಿಸಿರುವ ಹರದ್ವಾರಕ್ಕೆ ಬುಧವಾರ ಬೆಳಿಗ್ಗೆ ಶ್ರೀ ವಚನಾನಂದ ಸ್ವಾಮೀಜಿ ಅವರು ಕಳಸಾರೋಹಣ ನೆರವೇರಿಸಿದರು.

**ರಕ್ತದಾನ :** ಮಠದಲ್ಲಿ ಹರ ಜಾತ್ರೆಯ ಅಂಗವಾಗಿ ಬುಧವಾರದಿಂದ ಮೂರು ದಿನಗಳ ರಕ್ತದಾನ ಶಿಬಿರ ಏರ್ಪಡಿಸಿದ್ದು, ಶ್ರೀ ವಚನಾನಂದ ಸ್ವಾಮೀಜಿ ಅವರು ರಕ್ತದಾನ ಮಾಡುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು.

ದಾವಣಗೆರೆ ಸಿ.ಜಿ. ಆಸ್ಪತ್ರೆಯ ರಕ್ತ ಸಂಗ್ರಹಣೆ ಮತ್ತು ವಿತರಣೆ ವಾಹನದಲ್ಲಿ ಈ ರಕ್ತದಾನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮೊದಲ ವಾರ ಬುಧವಾರ 20 ಕ್ಕೂ ಹೆಚ್ಚು ಜನ ರಕ್ತ ದಾನ ಮಾಡಿದರು.

**ಸೂಕ್ತ ಬಂದೋಬಸ್ತ್ :** ಎಎಸ್ಪಿ ರಾಜೀವ್, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಸತೀಶ್ ಕುಮಾರ್, ಪಿಎಸ್ಐ ರವಿಕುಮಾರ್, ವೀರಬಸಪ್ಪ ಅವರ ನೇತೃತ್ವದಲ್ಲಿ ಜಾತ್ರೆಗೆ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

# ಅವಕಾಶ ವಂಚಿತರಿಂದ ಸಿಎಂ ಮೇಲೆ ಆಕ್ರೋಶ

**(1ನೇ ಪುಟದಿಂದ)** ದೂರವಿಟ್ಟಿರುವುದು ಯಾತಕ್ಕೆ? ಎಂದು ಪ್ರಶ್ನಿಸಿದ್ದಾರೆ.

ಮತ್ತೆ ಕೆಲವರು ಬ್ಲ್ಯಾಕ್‌ಮೇಲರ್‌ಗಳಿಗೆ ಅವಕಾಶ ನೀಡಿ, ನಿಷ್ಠಾವಂತರನ್ನು ಕಡೆಗಣಿಸಿದ್ದೀರಿ ಎಂದಿರುವುದಲ್ಲದೆ, ತಿಪ್ಪಾರೆಡ್ಡಿ ಅವರಂತಹ ಹಿರಿಯ ಶಾಸಕರಿದ್ದರೂ, ಸಿ.ಪಿ. ಯೋಗೇಶ್ವರ್ ಮಂತ್ರಿಯಾಗಿರುವ ಔಚಿತ್ಯವನ್ನು ಪ್ರಶ್ನಿಸಿದ್ದಾರೆ.

ಯಡಿಯೂರಪ್ಪನವರು ಜಾತಿ ರಾಜಕಾರಣವನ್ನು ವೈಭವೀಕರಿಸಿ, ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿ, ವಲಸಿಗರಿಗೆ ಹೆಚ್ಚು ಸ್ಥಾನಮಾನ ನೀಡಿದ್ದಾರೆ ಎಂದು ಸರ್ಕಾರಿ ಮುಖ್ಯಸಚೇತಕ ಸುನೀಲ್‌ಕುಮಾರ್ ಟ್ವೀಟ್ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಿಂದೆ ಎರಡು ಬಾರಿ ಸಂಪುಟ ವಿಸ್ತರಣೆಯಾದ ಸಂದರ್ಭದಲ್ಲೂ ಮೂಲ ಬಿಜೆಪಿ ಶಾಸಕರು ಅದರಲ್ಲೂ ನಿಷ್ಠಾವಂತರು ಅಪಸ್ವರ ಎತ್ತಿರಲಿಲ್ಲ. ಆದರೆ ಇಂದು ಮುಖ್ಯಮಂತ್ರಿ ವಿರುದ್ಧ ಸರಣಿ ಟ್ವೀಟ್ ಮಾಡಿ, ತಮ್ಮ ಕೋಪವನ್ನು ಕಾರಿಕೊಂಡಿದ್ದಾರೆ.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಸತೀಶ್ ರೆಡ್ಡಿ, ದಿವಂಗತ ಅನಂತಕುಮಾರ್ ಅವರು ಬದುಕಿದ್ದರೆ, ಪಕ್ಷಕ್ಕೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ ಎಂದಿದ್ದಾರೆ.

ಒಂದು ಹೆಜ್ಜೆ ಮುಂದು ಹೋಗಿರುವ ಅವರು, ರೀ ಯಡಿಯೂರಪ್ಪನವರೇ, ಮಂತ್ರಿಮಂಡಲ ವಿಸ್ತರಣೆಯಲ್ಲಿ ಸಚಿವರ ಆಯ್ಕೆ ಪ್ರಕ್ರಿಯೆಯ ಮಾನದಂಡಗಳೇನು ಎಂದು ಟ್ವೀಟ್‌ನಲ್ಲೇ ಪ್ರಶ್ನಿಸಿದ್ದಾರೆ.

ನಿಮಗೆ ನಮ್ಮ ರಾಜ್ಯ ಮತ್ತು ರಾಷ್ಟ್ರದ ನಾಯಕರುಗಳಿಗೆ ನಿಷ್ಠಾವಂತ ಯುವ ಕಾರ್ಯಕರ್ತರು ಕಾಣುತ್ತಿಲ್ಲವೇ. ನಮ್ಮ ಕಷ್ಟ, ನಷ್ಟಗಳನ್ನು ಅರಿಯಲು ಅನಂತಕುಮಾರ್ ಇಲ್ಲದಿರುವುದು ಎದ್ದು ಕಾಣುತ್ತಿದೆ.

ಎಸ್.ಎ. ರಾಮದಾಸ್ ಪ್ರತ್ಯೇಕ ಟ್ವೀಟ್ ಮಾಡಿ, ಅನ್ಯ ಮಾರ್ಗದಲ್ಲಿ ಸಚಿವನಾಗುವುದು ನನ್ನ ಆತ್ಮಸಾಕ್ಷಿಗೆ ವಿರುದ್ಧವಾದುದು. ನಾನು ಪಕ್ಷದ ಶಾಸಕನಾಗಿದ್ದು, ಪಕ್ಷ ನನ್ನ ತಾಯಿ ಮತ್ತು ಅದರ ಘನತೆ ಎಂದು ಅರಿತವನು. ನಾನೊಬ್ಬ ನಿಜವಾದ ಸ್ವಯಂ ಸೇವಕ.

ಹಳೆ ಮೈಸೂರು ಪ್ರಾಂತ್ಯಕ್ಕೆ ಆದ ಅನ್ಯಾಯ, ಮೈಸೂರು ಜಿಲ್ಲೆಯಲ್ಲಿ ಬೇರೆ ಯಾರನ್ನಾದರೂ ಮಂತ್ರಿ ಮಾಡಬಹುದಿತ್ತು ಎಂದಿದ್ದಾರೆ.

ಸಂಪುಟದಲ್ಲಿ ಸಚಿವ ಸ್ಥಾನ ಸಿಗುವುದಿಲ್ಲ ಎಂದು ಖಚಿತವಾಗುತ್ತಿದ್ದಂತೆ ಆಕ್ರೋಶಗೊಂಡಿರುವ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ, ಶಾಸಕರಾದ ತಿಪ್ಪಾರೆಡ್ಡಿ, ಗೂಳಿಹಟ್ಟಿ ಶೇಖರ್, ಕೆ.ಜಿ. ಬೋಪಯ್ಯ, ಅಪ್ಪಚ್ಚುರಂಜನ್, ರಾಜುಗೌಡ ನಾಯಕ್, ಸುನೀಲ್‌ಕುಮಾರ್ ಸೇರಿದಂತೆ ಮತ್ತಿತರೆ ಶಾಸಕರು ಅಸಮಾಧಾನ ಹೊರಹಾಕಿದ್ದಾರೆ.

ಅದರಲ್ಲೂ ಹೊನ್ನಾಳಿ ಕ್ಷೇತ್ರದ ಶಾಸಕ ಎಂ.ಪಿ. ರೇಣುಕಾಚಾರ್ಯ ಬಹಿರಂಗವಾಗಿಯೇ ಆಕ್ರೋಶ ವ್ಯಕ್ತಪಡಿಸಿದ್ದು, ಸೋತವರನ್ನೆಲ್ಲ ಮಂತ್ರಿ ಮಾಡುವುದಾದರೆ ಜನರಿಂದ ಗೆದ್ದ ನಾವು ಏನು ಮಾಡಬೇಕು? ಎಂದು ಪ್ರಶ್ನಿಸಿದ್ದಾರೆ.

ಚಿತ್ರದುರ್ಗದ ಶಾಸಕ ತಿಪ್ಪಾರೆಡ್ಡಿ ಕೂಡ ಸಂಪುಟಕ್ಕೆ ತಮ್ಮನ್ನು ಪರಿಗಣಿಸದಿರುವುದಕ್ಕೆ ಬೇಸರ ಹೊರಹಾಕಿದ್ದಾರೆ. ಸೋತ ಸಿ.ಪಿ. ಯೋಗೇಶ್ವರ್ ಅವರನ್ನು ಯಾವ ಕಾರಣಕ್ಕಾಗಿ ಮಂತ್ರಿ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸರ್ಕಾರ ರಚನೆ ಮಾಡಲು ಸಹಕಾರ ನೀಡಿದ್ದಾರೆ ಎಂದು ಹೇಳುತ್ತಿದ್ದಾರೆ. ಯಾವ ರೀತಿ ಸಹಾಯ ಮಾಡಿದ್ದಾರೆ? ಎಂದು ಪ್ರಶ್ನಿಸಿದರು.

ಸಂಪುಟದಲ್ಲಿ ಸಮಾನತೆ ಕಾಣುತ್ತಿಲ್ಲ. 50 ವರ್ಷಗಳ ರಾಜಕೀಯ ಮಾಡಿದ್ದೇ ವ್ಯರ್ಥವಾಯಿತು ಎಂಬ ನೋವು ಕಾಡುತ್ತಿದೆ. ನಾನು 6 ಬಾರಿ ಶಾಸಕನಾಗಿದ್ದೇನೆ. ನನ್ನಂತವರನ್ನೇ ಕಡೆಗಣಿಸುತ್ತಾರೆಂದರೆ, ನಮ್ಮ ನೋವು ಯಾರಿಗೆ ಹೇಳಿಕೊಳ್ಳಬೇಕು ಎಂದು ತಿಪ್ಪಾರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇನ್ನು ಹಾವೇರಿ ಶಾಸಕ ನೆಹರು ಓಲೇಕಾರ್ ಕೂಡ ಸಂಪುಟದಲ್ಲಿ ಸ್ಥಾನಮಾನ ಸಿಗದಿರುವುದಕ್ಕೆ ಕಿಡಿಕಾರಿದ್ದಾರೆ. ನನಗೆ ಈ ಬಾರಿಯಾದರೂ ಮಂತ್ರಿಸ್ಥಾನ ಸಿಗಬಹುದೆಂಬ ನಿರೀಕ್ಷೆಯಿತ್ತು.

ಪರಿಶಿಷ್ಟ ಜಾತಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವಕಾಶ ಕೊಡುತ್ತಾರೆ ಎಂಬ ವಿಶ್ವಾಸವಿತ್ತು. ಆದರೆ ನನಗೆ ಈವರೆಗೂ ಯಾವುದೇ ದೂರವಾಣಿ ಕರೆ ಬಂದಿಲ್ಲ. ಬರುವ ಲಕ್ಷಣಗಳೂ ಇಲ್ಲ. ಸಚಿವನಾಗಬೇಕೆಂಬ ಆಸೆ ಬಿಟ್ಟು ಬಿಟ್ಟಿದ್ದೇನೆ ಎಂದು ಆಕ್ರೋಶದಿಂದ ನುಡಿದರು.

ಇದೇ ರೀತಿ ಕೆಲವು ಶಾಸಕರು ಬಹಿರಂಗವಾಗಿ ಮಾತನಾಡದಿದ್ದರೂ ಒಳಗೊಳಗೆ ವರಿಷ್ಠರ ತೀರ್ಮಾನಕ್ಕೆ ಆಕ್ರೋಶಗೊಂಡಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದಿಂದ ಕೇವಲ ಮುರುಗೇಶ್ ನಿರಾಣಿಗೆ ಸ್ಥಾನ ನೀಡಲಾಗಿದೆ. ಈ ಭಾಗದಿಂದ ವಿಜಾಪುರದ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್, ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಪ್ಪುಗೌಡ ಪಾಟೀಲ್, ಸುರಪುರದ ರಾಜುಗೌಡ ನಾಯಕ್, ರಾಯಚೂರಿನ ಶಿವರಾಜ್ ಪಾಟೀಲ್, ಯಲಬುರ್ಗದ ಆಚಾರ್ ಹಾಲಪ್ಪ , ಶಿವನಗೌಡ ನಾಯಕ್, ಆರಗ ಜ್ಞಾನೇಂದ್ರ, ಪೂರ್ಣಿಮಾ ಶ್ರೀನಿವಾಸ್ ಮತ್ತಿತರರು ಅಸಮಾಧಾನಗೊಂಡಿದ್ದಾರೆ.

ಮಾಧ್ಯಮಗಳ ಮುಂದೆ ಬಹಿರಂಗವಾಗಿ ಹೇಳಿಕೆ ನೀಡಿದರೆ ಪಕ್ಷದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಕೆಲವರು ಹೇಳಲೂ ಆಗದೆ ಒಳಗೊಳಗೆ ಕುದಿಯುತ್ತಿದ್ದಾರೆ.

ವಲಸೆ ಬಂದವರಿಗೆ ಮಣೆ ಹಾಕುವುದಾದರೆ, ಪಕ್ಷಕ್ಕೆದುಡಿದ ನಾವೇನು ರಾಜಕೀಯ ಸನ್ಯಾಸಿಗಳೇ ಎಂದು ಅನೇಕ ಶಾಸಕರು ತಮ್ಮ ಆಪ್ತರ ಬಳಿ ಮಾತನಾಡಿಕೊಂಡಿದ್ದಾರೆ.

ಯಡಿಯೂರಪ್ಪನವರ ಸಂಪುಟದಲ್ಲಿ 15ಕ್ಕೂ ಹೆಚ್ಚಿನ ಜಿಲ್ಲೆಗಳಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಸಾಮಾಜಿಕ ನ್ಯಾಯ ಕೂಡ ಯಡಿಯೂರಪ್ಪ ಅವರ ಸಂಪುಟದಲ್ಲಿ ಕಾಣುತ್ತಿಲ್ಲ ಎಂಬ ಆರೋಪಗಳಿವೆ. ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆ ಬಳಿಕ ಬಿಜೆಪಿಯಲ್ಲಿ ಮತ್ತೊಂದು ಹಂತದ ರಾಜಕೀಯ ವಿಪ್ಲವ ನಡೆಯುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಕಲಬುರಗಿ, ಯಾದಗಿರಿ, ವಿಜಯಪುರ, ಬಳ್ಳಾರಿ, ರಾಯಚೂರು, ಕೊಪ್ಪಳ, ದಾವಣಗೆರೆ, ಕೊಡಗು, ಚಾಮರಾಜನಗರ, ಉಡುಪಿ, ರಾಮನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಶಾಸಕರಿಗೆ ಮಂತ್ರಿಗಳಾಗುವ ಅದೃಷ್ಟ ಸಿಕ್ಕಿಲ್ಲ. ಹೀಗಾಗಿ ಈ ಜಿಲ್ಲೆಗಳ ಶಾಸಕರಲ್ಲಿ ಅಸಮಾಧಾನವಿದೆ.

## ವಿಶ್ವನಾಥ್ ಆಕ್ರೋಶ

ಬೆಂಗಳೂರು, ಜ.13- ಸಂಪುಟ ವಿಸ್ತರಣೆ ನಡೆದು ನೂತನ ಸಚಿವರ ಪ್ರಮಾಣ ವಚನ ಕಾರ್ಯಕ್ರಮ ನಡೆಯುತ್ತಿದ್ದಂತೆಯೇ ಬಿಜೆಪಿಯಲ್ಲಿ ಆಕ್ರೋಶ ಹೆಚ್ಚಾಗಿದೆ. ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್, ಶಾಸಕ ಸತೀಶ್ ರೆಡ್ಡಿ, ಮುನಿರತ್ನ, ಬಳ್ಳಾರಿಯ ರೆಡ್ಡಿ ಸಹೋದರರು ಮುಖ್ಯಮಂತ್ರಿಗಳ ವಿರುದ್ಧ ಮುನಿಸಿಕೊಂಡಿದ್ದಾರೆ.

ಏತನ್ಮಧ್ಯೆ ಮೈಸೂರಿನಲ್ಲಿ ಹೇಳಿಕೆ ನೀಡಿರುವ ವಿಶ್ವನಾಥ್, ನಮ್ಮ ಭಿಕ್ಷೆಯಿಂದಲೇ ಮುಖ್ಯಮಂತ್ರಿ ಯಾದ ಯಡಿಯೂರಪ್ಪ, ಮಾತಿಗೆ ತಪ್ಪಿದ್ದಾರೆ ಎಂದು ಆಕ್ರೋಶ ಹೊರ ಹಾಕಿದ್ದಾರೆ. ಎಲ್ಲ ಪಕ್ಷಗಳ ನಾಯಕರೂ ಒಂದೇ ಕೃತಜ್ಞತೆ ಇಲ್ಲ. ಕುಮಾರಸ್ವಾಮಿ, ಸಿದ್ದರಾಮಯ್ಯ, ಯಡಿಯೂರಪ್ಪ ಎಲ್ಲ ಒಂದೇ' ಎಂದು ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದರು.

ಬೇರೆ ಪಕ್ಷಗಳಿಂದ ಬಂಡೆದ್ದು ಬಂದ ಎಲ್ಲ 17 ಮಂದಿಗೂ ಸಚಿವ ಸ್ಥಾನ ನೀಡುವುದು ಆದ್ಯತೆ ಆಗಿತ್ತು. ನಾವು ಬಂಡೇಳದಿದ್ದರೆ, ಬಿಜೆಪಿ ಸರ್ಕಾರ ರಚನೆ ಆಗಲು ಅವಕಾಶವೇ ಇರಲಿಲ್ಲ ಎಂದು ಕಿಡಿ ಕಾರಿದರು.

# ಏಳು ಶಾಸಕರಿಗೆ ಸಚಿವ ಸ್ಥಾನ

**(1ನೇ ಪುಟದಿಂದ)** ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಮುಖ್ಯಮಂತ್ರಿಯವರು 16 ತಾಸುಗಳ ಕಾಲ ಕಸರತ್ತು ನಡೆಸಿದರೂ, ವರಿಷ್ಠರು ಇದಕ್ಕೆ ಮಣೆ ಹಾಕಲಿಲ್ಲ.

ಸರ್ಕಾರ ರಚನೆಗೆ ಕಾರಣರಾದ ಹಾಗೂ ವಿಧಾನ ಪರಿಷತ್‌ನ ಸದಸ್ಯರಾದ ಎಂಟಿಬಿ ನಾಗರಾಜ್, ಸಿ.ಪಿ. ಯೋಗೇಶ್ವರ್, ಆರ್. ಶಂಕರ್‌ಗೆ ಅವಕಾಶ ನೀಡಿದರಾದರೂ, ಮುನಿರತ್ನ ಹಾಗೂ ಹೆಚ್.ವಿಶ್ವನಾಥ್ ಅವರಿಗೆ ಮಂತ್ರಿಮಂಡಲಕ್ಕೆ ಸೇರ್ಪಡೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ.

ಮುಖ್ಯಮಂತ್ರಿಯವರು ಮಾಡಿದ ಶಿಫಾರಸ್ಸಿಗೆ ಮೂರು ಮಂದಿಗೆ ಮಾತ್ರ ಅವಕಾಶ ನೀಡಿ, ಉಳಿದ ಹೆಸರುಗಳನ್ನು ವರಿಷ್ಠರೇ ಕಳುಹಿಸಿಕೊಟ್ಟಿದ್ದಾರೆ.

ವರಿಷ್ಠರು ಕಳುಹಿಸಿದ ಪಟ್ಟಿಯಲ್ಲಿ ಕೆಲ ಬದಲಾವಣೆ ಮಾಡಿ, ಮುನಿರತ್ನ ನಾಯ್ಡು ಸೇರಿದಂತೆ ತಮಗೆ ಬೇಕಾದ ಇಬ್ಬರನ್ನು ತೆಗೆದುಕೊಳ್ಳಲು ಇಂದು ಬೆಳಿಗ್ಗೆ 11 ಗಂಟೆಯವರೆಗೂ ಹರಸಾಹಸ ನಡೆಸಿದರು.

ಮುಖ್ಯಮಂತ್ರಿಯವರ ಮನವಿಗೆ ವರಿಷ್ಠರು ಸ್ಪಂದಿಸದ ಕಾರಣ 11.30ಕ್ಕೆ ಮಂತ್ರಿಮಂಡಲಕ್ಕೆ ಸೇರ್ಪಡೆಯಾಗುವವರ ಪಟ್ಟಿಯನ್ನು ಹಾಗೂ ನಾಗೇಶ್ ಅವರನ್ನು ಸಂಪುಟದಿಂದ ಕೈಬಿಡುವ ಪ್ರಸ್ತಾವವನ್ನು ರಾಜಭವನಕ್ಕೆ ಕಳುಹಿಸಿ, ನಂತರ ಮಾಧ್ಯಮಗಳಿಗೆ ಅಧಿಕೃತವಾಗಿ ಸಂಪುಟಕ್ಕೆ ಸೇರ್ಪಡೆಗೊಳ್ಳುವವರ ಪಟ್ಟಿ ಬಿಡುಗಡೆ ಮಾಡಿದರು.

ರಾಜಭವನದ ಗಾಜಿನ ಮನೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ವಾಜುಭಾಯ್ ರೂಢಾಬಾಯ್ ವಾಲಾ, ನೂತನ ಸದಸ್ಯರಿಗೆ ಗೌಪ್ಯತಾ ವಿಧಿ ಬೋಧಿಸಿದರು.

ಕೋವಿಡ್-19 ಹಿನ್ನೆಲೆಯಲ್ಲಿ ರಾಜಭವನದ ಪ್ರವೇಶಕ್ಕೆ ರಾಜ್ಯಪಾಲರು ಭಾರೀ ನಿರ್ಬಂಧ ಹೇರಿದ್ದರಿಂದ ಸಾರ್ವಜನಿಕರು ಹಾಗೂ ಸಂಪುಟಕ್ಕೆ ಸೇರ್ಪಡೆಗೊಂಡ ಸದಸ್ಯರ ಕುಟುಂಬದ ಸದಸ್ಯರಿಗೂ ಒಳಪ್ರವೇಶವಿರಲಿಲ್ಲ.

ಸಚಿವರು, ಶಾಸಕರು, ಸಂಸದರು ಹಾಗೂ ಕೆಲ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಮಾರಂಭದಲ್ಲೇ ಏಳು ಮಂದಿ ಪ್ರಮಾಣ ವಚನ ಸ್ವೀಕರಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಹೊರತುಪಡಿಸಿದರೆ, ಉಳಿದ ಯಾವುದೇ ರಾಜಕೀಯ ಪಕ್ಷಗಳ ನಾಯಕರು ಹಾಗೂ ಜನಪ್ರತಿನಿಧಿಗಳು ಸಮಾರಂಭದಿಂದ ದೂರ ಉಳಿದಿದ್ದರು. ನಿಗದಿತ ಸಮಯಕ್ಕಿಂತ 12 ನಿಮಿಷ ತಡವಾಗಿ ಕಾರ್ಯಕ್ರಮ ಆರಂಭಗೊಂಡರೂ, 23 ನಿಮಿಷಗಳಲ್ಲೇ ಮುಕ್ತಾಯಗೊಂಡಿತು.

ಇಂದು ಸೇರ್ಪಡೆಗೊಂಡ ನೂತನ ಸಚಿವರಲ್ಲಿ ತಲಾ ಇಬ್ಬರು ವೀರಶೈವ ಹಾಗೂ ಕುರುಬ ಸಮುದಾಯ ಉಳಿದಂತೆ ಪರಿಶಿಷ್ಠ ಜಾತಿ ಹಾಗೂ ವರ್ಗಕ್ಕೆ ತಲಾ ಒಂದು ಹಾಗೂ ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ವಿಧಾನಸಭೆಗೆ ಎಂಟು ಬಾರಿ ಆಯ್ಕೆಗೊಂಡಿದ್ದರೂ, ಉಮೇಶ್ ಕತ್ತಿ ಅವರನ್ನು ಇಷ್ಟು ದಿನಗಳ ಕಾಲ ಮಂತ್ರಿಮಂಡಲಕ್ಕೆ ಸೇರ್ಪಡೆ ಮಾಡಿಕೊಳ್ಳಲು ಬಿಜೆಪಿ ವರಿಷ್ಠರು ಅವಕಾಶ ಮಾಡಿಕೊಟ್ಟಿರಲಿಲ್ಲ. ಮೊದಲ ಎರಡು ವಿಸ್ತರಣೆಗಳಲ್ಲೂ ಸರ್ಕಾರ ರಚನೆಗೆ ಕಾರಣಕರ್ತರಾದವರಿಗೆ ಹೆಚ್ಚು ಅವಕಾಶ ನೀಡಲಾಗಿತ್ತು.

ವರಿಷ್ಠರು ಮಧ್ಯೆ ಪ್ರವೇಶ ಮಾಡಿದ್ದರಿಂದ ಪಕ್ಷದ ಹಿರಿಯ ಸದಸ್ಯರಾದ ಅರವಿಂದ ಲಿಂಬಾವಳಿ, ಎಸ್. ಅಂಗಾರ ಅವರಿಗೆ ಮಂತ್ರಿಯಾಗುವ ಅವಕಾಶ ದೊರೆಯಿತು. ಲಿಂಬಾವಳಿ ನಾಲ್ಕನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರೆ, ಮೀಸಲು ಕ್ಷೇತ್ರದಿಂದ ಸತತವಾಗಿ ಆರನೇ ಬಾರಿ ವಿಧಾನಸಭಾ ಪ್ರವೇಶ ಮಾಡಿದ್ದಾರೆ.

# ಎಲ್ಲಾ ಜಿಲ್ಲೆಗಳಿಗೂ ಲಸಿಕೆ ಪೂರೈಕೆ

**(1ನೇ ಪುಟದಿಂದ)** 37610, ಬೆಂಗಳೂರು ಗ್ರಾಮಾಂತರ 11390, ಬಿಬಿಎಂಪಿ 210080, ಬಳ್ಳಾರಿ 22160, ಬೀದರ್ 11180, ಚಾಮರಾಜನಗರ 7770, ಚಿಕ್ಕಮಗಳೂರು 11470, ಚಿಕ್ಕಬಳ್ಳಾಪುರ 9980, ಚಿತ್ರದುರ್ಗ 19330, ದಕ್ಷಿಣ ಕನ್ನಡ 48450 ಲಸಿಕೆಗಳನ್ನು ಹಂಚಿಕೆ ಮಾಡಲಾಗಿದೆ.

ದಾವಣಗೆರೆ 28810, ಕಲಬುರಗಿ 23110, ಹಾಸನ 21560, ಕೊಡಗು 7960, ಕೋಲಾರ 15540, ಮಂಡ್ಯ 16160, ಮೈಸೂರು 41460, ರಾಯಚೂರು 18310, ರಾಮನಗರ 10450, ಶಿವಮೊಗ್ಗ 26470, ತುಮಕೂರು 23810, ಉಡುಪಿ 23900, ಯಾದಗಿರಿ 6000 ಲಸಿಕೆಗಳನ್ನು ಹಂಚಿಕೆ ಮಾಡಲಾಗಿದೆ. ಬೆಳಗಾವಿ ವಿಭಾಗದಲ್ಲಿ ಬೆಳಗಾವಿ ಜಿಲ್ಲೆಗೆ 35960, ಧಾರವಾಡ 28380, ಗದಗ 10870, ಹಾವೇರಿ 8280, ಕೊಪ್ಪಳ 11720, ಉತ್ತರ ಕನ್ನಡ 15090, ವಿಜಯಪುರ 18720 ಹಾಗೂ ಬಾಗಲಕೋಟೆ 16730 ಲಸಿಕೆ ಹಂಚಿಕೆ ಮಾಡಲಾಗಿದೆ.

## ನೀವೇನಂತೀರಿ??

ಮಾಗಿಯ ಚಳಿಗೆ ಗಿಡ ಮರದೆಲೆಗಳು
ಸಂತಸದಲುದುರಿ ಮೈ-ಮನ ಬೋಳು!
ಮಾಗಿದ ಹಣ್ಣು ಹಂಪಲುಗಳುಂಡರೂ
ಮಾಗದ ಮನುಜನ ಬದುಕೇ ಗೋಳು!
"ಭ್ರಾಂತಿಯಾಗದಿರಲಿ ಸಂಭ್ರಮದ
ಸಂಕ್ರಾಂತಿ" ಅಂತಾನೆ ಕೊಂಕುತಿಮ್ಮ!?

**- ಮಹಾಂತೇಶ್.ಬಿ.ನಿಟ್ಟೂರ್, ದಾವಣಗೆರೆ.**

# ಒಕ್ಕಲು ಮಾಡುವ ರೈತರ ಚಳಿ ಬಿಡಿಸಿದ ನ್ಯಾಯಾಧೀಶರು

**(1ನೇ ಪುಟದಿಂದ)** ತೊಗರಿ, ರಾಗಿ ಕಾಳು ಕಡಿಗಳನ್ನು ಒಕ್ಕುವುದರಿಂದ ವಾಹನ ಸವಾರರು ಅಪಘಾತ ಮಾಡಿಕೊಂಡು ಮೃತಪಟ್ಟಿದ್ದಾರೆ. ಹಲವರು ಅಂಗವಿಕಲರಾಗಿದ್ದಾರೆ.

ರಸ್ತೆಯಲ್ಲಿ ಸಾಗುವ ವಾಹನಗಳಿಂದ ಡೀಸೇಲ್, ಪೆಟ್ರೋಲ್ ಆಯಿಲ್‌ಗಳು ಪ್ರೋಕ್ಷಣೆಯಾಗುತ್ತದೆ. ಟೈರ್‌ಗಳಿಗೆ ಹತ್ತಿದ ಮಲಿನ, ವಿಷಕಾರಕ ಪದಾರ್ಥಗಳು ಆಹಾರ ಧಾನ್ಯ ಸೇರುತ್ತದೆ. ಇದರಿಂದ ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದರು.

ರೈತರಿಗೆ ಸರ್ಕಾರವು ಕಣಗಳನ್ನು ಮಾಡಿಕೊಡುವುದಕ್ಕೆ ಸರ್ಕಾರದ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ರೈತರು ಅನಿವಾರ್ಯವಾಗಿ ರಸ್ತೆಗೆ ಬರಬೇಕಾಗುತ್ತದೆ ಎಂದು ಅಭಿಪ್ರಾಯಿಸಿದರು.

ತಾಲ್ಲೂಕಿನ ಆಯಾಯ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ರಸ್ತೆ ಮಧ್ಯೆ ಒಕ್ಕಲು ಮಾಡುತ್ತಿರುವ ರೈತರಿಗೆ ಬುದ್ದಿ ಹೇಳಿ ಅವರಿಗೆ ಕಣಗಳಲ್ಲಿ ಒಕ್ಕಲು ಮಾಡಿಕೊಳ್ಳುವುದಕ್ಕೆ ಸಲಹೆ ನೀಡಬೇಕು. ಮಾತು ಕೇಳದೆ ಇರುವವರ ವಿರುದ್ಧ ಸೂಕ್ತ ಕ್ರಮಕೈಗೊಂಡು ಸರ್ಕಾರದಿಂದ ಪಡೆಯುತ್ತಿರುವ ಎಲ್ಲಾ ಸೌಲಭ್ಯಗಳನ್ನು ಹಿಂಪಡೆಯಬೇಕು ಎಂದು ಅಧಿಕಾರಿಗಳಿಗೆ ಹೇಳಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ವಿ.ಕೆ. ಪ್ರಸನ್ ಕುಮಾರ್, ತಹಶೀಲ್ದಾರ್ ನಂದೀಶ್, ಪಿ.ಎಸ್.ಐ. ಸಿ. ಪ್ರಕಾಶ್, ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ್ರು, ಇಂಜಿನಿಯರ್ ನಿಂಗಪ್ಪ, ಕುಬೇಂದ್ರನಾಯ್ಕ್, ಪಿಡಿಓ ಚಂದ್ರನಾಯ್ಕ್, ಗ್ರಾಮ ಲೆಕ್ಕಾಧಿಕಾರಿ ನನ್ಯಾಸಾಬ್ ಮತ್ತು ಇತರರು ಇದ್ದರು.

**ದಿನದ ಚುಟುಕು**

ಬದುಕಿಹುದು ಮಾಯಾಜಾಲದಲಿ
ಬ್ರಹ್ಮಬರೆದ ಹಣೆ ಬರಹದಲ್ಲಿ
ಪಾಲಿಗೆ ಬಂದದ್ದು ಪಂಚಾಮೃತ
ಅರಿತು ಬಾಳಲದು ಬಹು ಸ್ವೀಕೃತ.!

- ವೀಕೆಎಂ

# ಸಂಕ್ರಾಂತಿ ಸಂಭ್ರಮಕ್ಕೆ ದೇವನಗರಿ ಸಜ್ಜು

**(1ನೇ ಪುಟದಿಂದ)** ಕೊರೊನಾದಿಂದಾಗಿ ಕಳೆದ ವರ್ಷ ವಾಯುವಿಹಾರಿಗಳನ್ನು ಜತೆ ಉದ್ಯಾನವನಗಳತ್ತ ಸುಳಿದಿರಲಿಲ್ಲ. ಆದರೆ, ಇದೀಗ ಕೊರೊನಾ ಹಾವಳಿ ಇಳಿಕೆಯಾಗಿದ್ದು, ನಾಳೆ ಸಂಕ್ರಾಂತಿ ದಿನದಂದು ಮತ್ತೆ ಉದ್ಯಾನವನಗಳು ತುಂಬಿಕೊಳ್ಳುವ ಸಾಧ್ಯತೆ ಇದೆ. ಮಕ್ಕಳು, ಮಹಿಳೆಯರು, ಪುರುಷರು ಕುಟುಂಬ ಸಹಿತ ಪಾರ್ಕುಗಳಿಗೆ ಆಗಮಿಸಿ, ಮನೆಯಿಂದ ತಂದ ಊಟ ವನ್ನು ಸವಿದು ತೆರಳುವುದು ನಗರದ ಜನತೆಗೆ ಸಂಕ್ರಾಂತಿ ವಿಶೇಷವಾಗಿದೆ.


**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 40x84 North, ಆಂಜನೇಯ ಬಡಾವಣೆಯಲ್ಲಿ 70x50 East South Corner, 30x40 North East Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ, 40x50 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ**
ಹೊಸ ಬಿಸಲೇರಿ ರಸ್ತೆಯಲ್ಲಿ ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ.94489 66128

**ಸೈಟ್‌ಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿ 30x50 ದಕ್ಷಿಣ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 30x40 ಪೂರ್ವ, ರಶ್ಮಿ ಹಾಸ್ಟೆಲ್ ಹತ್ತಿರ ಸೈಟುಗಳು ಇವೆ.
ಮಂಜುನಾಥ್, ರಿಯಲ್ ಎಸ್ಟೇಟ್ ಏಜೆಂಟ್
98444 91792

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ, 38½x40 ಪಶ್ಚಿಮ, 30x40 ಪೂರ್ವ ಮನೆ, ನಿಜಲಿಂಗಪ್ಪ ಬಡಾವಣೆ 30x40 ಉತ್ತರ ಮನೆ, ನಿಜಲಿಂಗಪ್ಪ ಬಡಾವಣೆ, 30x35 ಉತ್ತರ ಬಾಗಿಲು ಪಶ್ಚಿಮ ದಿಕ್ಕು, 2 ಮನೆ 1 ಪೂರ್ವ ಮನೆ 30x40 ಮಲ್ಲಿಕಾರ್ಜುನ್ ಬಡಾವಣೆ, ವಾಜಪೇಯಿ ಬಡಾವಣೆ 34x40 ಪೂರ್ವ, 30x40 ಪೂರ್ವ, 30x50 ಪಶ್ಚಿಮ (ಶಾಮನೂರು) 30x55 ಪೂರ್ವ ಸೈಟ್ ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**HOUSE FOR RENT**
3 BHK, Bore & corp water, #1815/10, 6th cross, A Block, S.S. layout, DVG-4
Contact:
94482 48062
70199 76084

**ಮನೆಗಳು ಮಾರಾಟಕ್ಕೆ**
ಕುವೆಂಪು ಬಡಾವಣೆಯಲ್ಲಿ 40x60 North 3 ಬೆಡ್ ರೂಮ್ ಮನೆ., ಎಸ್.ಎಸ್. 'ಬಿ' ಬ್ಲಾಕ್‌ನಲ್ಲಿ 35x46 North East Corner 2 ಬೆಡ್‌ರೂಂ ಮನೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x46 ಪೂರ್ವ, 30x44 ಪೂರ್ವ, 30x57 ಪೂರ್ವ, ಹೊಸ ಬನಶಂಕರಿ ಲೇಔಟ್‌ನ ಡಾ|| ಲೇಔಟ್‌ನಲ್ಲಿ 30x50 ಪಶ್ಚಿಮ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**TO LET**
2 BHK House 1st Floor # 2831 "Ganga" 4th main, 4th cross, M.C.C. 'B' Block, Davanagere -577004
Ph: 93799 20680

**ಮನೆ+ರೂಂ ಬಾಡಿಗೆಗೆ**
ಉತ್ತರ ದಿಕ್ಕು 20x40 1ನೇ ಫ್ಲೋರ್ 2BHK 2ನೇ ಫ್ಲೋರ್ ರೂಂ ಬಾಡಿಗೆ ಇದೆ. ESI ಹಾಸ್ಪಿಟಲ್ ಹತ್ತಿರ RVK ಸ್ಕೂಲ್ ಹಿಂಭಾಗ ನಿಟ್ಟುವಳ್ಳಿ ರೋಡ್ ದಾವಣಗೆರೆ. (ಸಸ್ಯಹಾರಿಗಳಿಗೆ)
81235 14203
85538 52275

**ತಕ್ಷಣ ಬೇಕಾಗಿದ್ದಾರೆ**
ವೇಟರ್ಸ್, ಕ್ಯಾಪ್ಟನ್, ಕ್ಲೀನಿಂಗ್
ಆಕರ್ಷಕ ಸಂಬಳ ನೀಡಲಾಗುವುದು.
93809 74740

**ಬೇಕಾಗಿದ್ದಾರೆ**
ಹರಿಹರದ ವೈನ್ ಶಾಪ್‌ಗಳಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಬಿಲ್ಲಿಂಗ್ ಆಪರೇಟರ್, ಕ್ಯಾಷಿಯರ್, ವೆಂಡರ್, ಸಪ್ಲೈಯರ್ ಬೇಕಾಗಿದ್ದಾರೆ. (ಸ್ಥಳೀಯರಿಗೆ ಮಾತ್ರ)
99726 98591

**Home Loans**
House Purchase Loans, House Mortgage Loans, House Construction Loans, House Revenue Loans, Site Purchase Loans, Commercial Building Loans, Agricultur Loans, Car Loans & Other Loans
98455 87805

**ಮಳಿಗೆ ಬಾಡಿಗೆಗೆ ಇದೆ**
ತ್ರಿಶೂಲ್ ಟಾಕೀಸ್ ರಸ್ತೆಯಲ್ಲಿ ಶ್ರೀ ಆದರ್ಶ ಶಾಮಿಯಾನ ಅಂಗಡಿಯ ಎದುರಿಗೆ ಇರುವ ಮಳಿಗೆ ಖಾಲಿ ಇದೆ. ಮಳಿಗೆ ಬಾಡಿಗೆಗೆ ಪಡೆಯಲು ಆಸಕ್ತಿಯುಳ್ಳವರು ಈ ಕೆಳಕಂಡ ನಂಬರ್‌ಗೆ ಸಂಪರ್ಕಿಸಿ
99451 99770

**ಮಳಿಗೆ ಬಾಡಿಗೆಗಿದೆ**
ಕೆ.ಬಿ. ಬಡಾವಣೆ, ಕಾವೇರಮ್ಮ ಶಾಲೆ ಪಕ್ಕ, ತ್ರಿಶೂಲ್ ಟಾಕೀಸ್ ಮುಖ್ಯ ರಸ್ತೆಯಲ್ಲಿ, ಉತ್ತರಾಭಿಮುಖವಾಗಿರುವ 15x35 (525 sq ft) ಇರುವ ಮಳಿಗೆ ಖಾಲಿ ಇದೆ.
ಫೋ. : 99861 02102, 97412 58405

**ಮನೆ/ರೂಂ ಬಾಡಿಗೆಗೆ**
2BHK ಮನೆ ಹಾಗೂ ಒಂದು ಅಟ್ಯಾಚ್ಡ್ ಬಾತ್‌ರೂಂ ಇರುವ ರೂಂ ಬಾಡಿಗೆಗೆ ಇದೆ. ಮೊದಲನೆ ಮಹಡಿ, ಉತ್ತರಾಭಿಮುಖ, ವಾಸ್ತು ಪ್ರಕಾರವಿದೆ. ವಿದ್ಯಾನಗರ 1ನೇ ಬಸ್‌ಸ್ಟ್ಯಾಂಡ್ ಹತ್ತಿರ. ಸಸ್ಯಹಾರಿಗಳಿಗೆ ಮಾತ್ರ
63615 93954

**ಬಾಡಿಗೆ ಮನೆಗಳಿಗೆ ಸಂಪರ್ಕಿಸಿ:**
86181 82332

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಹಳೇಪೇಟೆ ಖಂಡಪ್ಪನ ಗಲ್ಲಿಯಲ್ಲಿ 12x45 ಅಳತೆಯ AEH, ಸೋಲಾರ್, ಕಾರ್ಪೊರೇಷನ್ ವಾಟರ್ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ.94480-47506

**ತಕ್ಷಣ ಬೇಕಾಗಿದ್ದಾರೆ**
ಹೌಸಿಂಗ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು / ಪುರುಷರು (ಹುಡುಗರು 18-26 ರೊಳಗೆ)
S.N.A. Plaza Building vinobanagara, 3rd main, P.B. Road, Davanagere.
91130 53483

**ರೂಂ ಬಾಡಿಗೆಗೆ ಇದೆ**
ಎಸ್. ನಿಜಲಿಂಗಪ್ಪ ಬಡಾವಣೆ (ರಿಂಗ್ ರಸ್ತೆ) 14ನೇ ಕ್ರಾಸ್‌ನ, 2ನೇ ಮಹಡಿಯಲ್ಲಿ ಅಟ್ಯಾಚ್ ರೂಂ ಬಾಡಿಗೆಗೆ ಇದೆ. ಸಂಪರ್ಕಿಸಿ.
98864 11119

**ಉಚಿತ 30 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ ರಿಟರ್ನ್ ಗಿಫ್ಟ್ 30 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು. ಸಂಪರ್ಕಿಸಿ:
94805 64551
91418 74551

**ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿ ವಾಸ್ತು ಪ್ರಕಾರ 3 BHK, ನೀರಿನ ಸೌಕರ್ಯ ಇರುವ ಮನೆ ಸಪ್ತಗಿರಿ ಹಾಸ್ಟೆಲ್ ಹಿಂಭಾಗ ಕುಂದವಾಡ ರಸ್ತೆ, ಬಸವೇಶ್ವರ ನಗರದಲ್ಲಿ ಲೀಸ್‌ಗೆ ಇರುತ್ತದೆ. ಸಂಪರ್ಕಿಸಿ:
98443 03551
94481 15270

**ತಕ್ಷಣ ಬೇಕಾಗಿದ್ದಾರೆ**
IMPULSE ಕಂಪನಿಗೆ 10th, PUC, Diploma & Degree ಆದ ಯುವಕರು AGE (18-24) Earn (8000-16000) PM 1photo Resume, Adhar xerox ನೊಂದಿಗೆ
81056 00262

**ಹೆಸರು ಬದಲಾವಣೆ**
ನಾನು ಶ್ರೀ ಜಿ.ಎಸ್. ಸುರೇಶ್ ಕುಮಾರ್ ಬಿನ್ ಜಿ. ನಾಗರಾಜಪ್ಪ ವಯಸ್ಸು 70 ವರ್ಷ #2301, 7ನೇ ಕ್ರಾಸ್, ಎಲ್.ಐ.ಜಿ. ಕ್ವಾಟ್ರಸ್, ವಿದ್ಯಾನಗರ ದಾವಣಗೆರೆ ವಾಸಿಯಾದ ನಾನು ನನ್ನ ಡಿ.ಎಲ್. ನಲ್ಲಿ (KA-17 19882002990) ರಲ್ಲಿ ನನ್ನ ತಂದೆಯ ಹೆಸರು ಜಿ. ನಾಗರಾಜಪ್ಪ ಎನ್ನುವುದರ ಬದಲಾಗಿ ನಾಗರಾಜ್ ರಾವ್ ಎಂದು ತಪ್ಪಾಗಿ ನಮೂದಾಗಿದೆ. ಆದ್ದರಿಂದ ದಿನಾಂಕ 12.1.2020 ರಂದು ನೋಟರಿ ದಾವಣಗೆರೆಯವರ ಮುಂದೆ ನನ್ನ ತಂದೆಯ ಹೆಸರು ಜಿ ನಾಗರಾಜಪ್ಪ ಸರಿ ಎಂದು ದೃಢೀಕರಿದ್ದೇನೆ. ಸಹಿ/-
ಶ್ರೀ ಜಿ.ಎಸ್. ಸುರೇಶ್ ಕುಮಾರ್

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೊಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಬೇಕಾಗಿದ್ದಾರೆ**
ಅಡುಗೆ ಭಟ್ರು, ಸಪ್ಲೈಯರ್, ಕ್ಲೀನರ್, ಹೋಟೆಲ್‌ನಲ್ಲಿ ಕೆಲಸ ಮಾಡಲು ಆಸಕ್ತರು ಬೇಕಾಗಿದ್ದಾರೆ.
99861 17995

**ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ**
ಉತ್ಸಾಹಿ ಹುಡುಗರು/ ಯುವಕರು ಕಮೀಷನ್ ಆಧಾರದ ಮೇಲೆ ಫುಡ್ ಡಿಲೆವರಿ ಮಾಡಲು ತಕ್ಷಣ ಬೇಕಾಗಿದ್ದಾರೆ.
91640 78078
99022 72893

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ಮಳಿಗೆಗಳು ಬಾಡಿಗೆಗೆ ಇದೆ**
ವಿನೋಬ ನಗರ 2ನೇ ಮುಖ್ಯರಸ್ತೆ, 1ನೇ 'A' ಕ್ರಾಸ್‌ನಲ್ಲಿರುವ ಮೊದಲನೇ ಮಹಡಿಯಲ್ಲಿ ಇರುವ ಆಫೀಸ್‌ಗಳಿಗಾಗಿ ಮಾಗನೂರು ಬಸಪ್ಪ ಸ್ಕೂಲ್ ಪಕ್ಕದಲ್ಲಿ ಮಳಿಗೆಗಳು ಬಾಡಿಗೆ ಇವೆ. ಬೇಕಾದ್ದಲ್ಲಿ ಸಂಪರ್ಕಿಸಿ
99451 99770

**ಗೋಡೌನ್ ಬಾಡಿಗೆಗೆ ಇದೆ**
ಹೊಸಪೇಟೆ ರಸ್ತೆ ಗುತ್ತೂರು ಕ್ರಾಸ್‌ನಲ್ಲಿ ಇರುವ ಇಂಡಸ್ಟ್ರೀ ಅಥವಾ ಗೋಡೌನ್ ಸಲುವಾಗಿ ಉಪಯೋಗವಾಗುವ 20 ಗುಂಟೆ ಜಾಗ ಸುತ್ತಲೂ ಕಾಂಪೌಂಡ್ ಇರುವ 105x80 ಅಳತೆಯ ಶೆಡ್ ಬಾಡಿಗೆಗೆ ಇದೆ.
ಫೋ.98444 13339

**Shops For Rent**
Measurement : 12x12, 14x24, Location: vidyanagara Main Road Opp Post office Buliding Davanagere.
Basavaraj
94483 93389

**SSLC/PUC CORRESPONDENCE**
ಸುವರ್ಣ ಅವಕಾಶ
ಸಿಂಚನ ಅಕಾಡೆಮಿ
SBI ATM ಹತ್ತಿರ, ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 86601 95955

**ಮನೆ ಮಾರುವುದಿದೆ**
ಜಯನಗರದಲ್ಲಿ ಈಗಾಗಲೇ ಲೀಸ್‌ನಲ್ಲಿರುವ ಪಶ್ಚಿಮ ದಿಕ್ಕಿನ (ಕಾರ್ನರ್) 30x40 ಅಳತೆಯ ಎರಡು ಅಂತಸ್ತಿನ ಸುಸಜ್ಜಿತ ಹೊಸ ಮನೆ ಮಾರುವುದಿದೆ ಆಸಕ್ತರು ಸಂಪರ್ಕಿಸಿ:
91104 29654

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಿಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಹೆಸರು ಬದಲಾವಣೆ**
ನಾನು ಕೃಷ್ಣ ಬಿ. ಬಿನ್ ಭೂತಪ್ಪ, 27 ವರ್ಷ # 50, 1ನೇ ಮೇನ್, 2ನೇ ಕ್ರಾಸ್, ಕೊಂಡಜ್ಜಿ ರಸ್ತೆ, ಎಸ್.ಜೆ.ಎಂ. ನಗರ, ದಾವಣಗೆರೆ ವಾಸಿಯಾದ ನಾನು ನನ್ನ ಸ್ವಇಚ್ಛೆಯಿಂದ ದಿನಾಂಕ 24.02.2015 ರಂದು ನೋಟರಿ ದಾವಣಗೆರೆಯವರ ಮುಂದೆ ಕಿರಣ್ ಪಾಲ್ ಬಿ. ಎಂದು ಬದಾಯಿಸಿಕೊಂಡಿದ್ದೇನೆ. ಇನ್ನು ಮುಂದೆ ನನ್ನ ವ್ಯವಹಾರಗಳು ಈ ಕೆಳಕಂಡ ಸಹಿ ಮಾಡಿದ ಹೆಸರಿನಲ್ಲಿಯೇ ನಡೆಯುತ್ತವೆ ಎಂದು ಪ್ರಮಾಣೀಕರಿಸಿದ್ದೇನೆ. ಸಹಿ-/
ಕಿರಣ್ ಪಾಲ್ ಬಿ.

**ಮನೆ ಸೈಟುಗಳು ಮಾರಾಟಕ್ಕೆ**
ಶಕ್ತಿನಗರ 26x40 (ಪಶ್ಚಿಮ) ಮನೆ, 30x40 (ಪೂರ್ವ) ಕಮರ್ಷಿಯಲ್ ಸೈಟ್ ಸರಸ್ವತಿ ನಗರ 20x30 (ಪಶ್ಚಿಮ) ಮನೆ, ಎಸ್.ಎಸ್. ಲೇಔಟ್ 30x35 (ಪೂರ್ವ), 2 ಫ್ಲೋರ್ ಮನೆ, ಬಸವೇಶ್ವರ ಲೇಔಟ್ 30x40 (ಪೂರ್ವ) 3 ಫ್ಲೋರ್ ಮನೆ, ಬಾಲಾಜಿ ಲೇಔಟ್ (ಪಶ್ಚಿಮ-ದಕ್ಷಿಣ ಕಾರ್ನರ್) 30x50 ಸೈಟ್, ನಿಜಲಿಂಗಪ್ಪ ಬಡಾವಣೆ 30x35 (ಉತ್ತರ) ಮನೆ , ಜಯನಗರ 30x40 (ಉತ್ತರ) ಮನೆ ಮಾರಾಟಕ್ಕಿವೆ.
98804 40602

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಮೇನ್ ರೋಡ್, ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ:
82177 72482

ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

**ಬೇಕಾಗಿದ್ದಾರೆ**
ಆಪೆ ಆಟೋ ಡೀಜಲ್ ಪ್ಯಾಸೆಂಜರ್, ಗೂಡ್ಸ್ ಆಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಶೋ ರೂಂಗೆ
ಡೀಜಲ್ ಮೆಕಾನಿಕ್ಸ್-4
ಕಂಪ್ಯೂಟರ್ ಆಪರೇಟರ್-4
ಸ್ಪೇರ್ ಪಾರ್ಟ್ಸ್ ಬಿಲ್ಲಿಂಗ್-2
ಆಸಕ್ತರು ಸೂಕ್ತ ದಾಖಲಾತಿಗಳೊಂದಿಗೆ ನೇರವಾಗಿ ಸಂಪರ್ಕಿಸಿ: ಸಮಯ : ಮ 3 ರಿಂದ 6. ಫೋನ್ /ಮೊಬೈಲ್ ವಿಚಾರಣೆ ಇರುವುದಿಲ್ಲ.
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-6.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**SAHYADRI PARAMEDICAL COLLEGE**
SSLC ಪಾಸ್, PUC ಪಾಸ್/ಫೇಲ್ Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ.
9019580600, 86601 95955

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**State Bank of India**
**ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ ('0' Account Open)
#264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

# ಜಗತ್ತನ್ನೇ ತಲ್ಲಣಗೊಳಿಸಿದ ಕೋವಿಡ್-19ಕ್ಕೆ ಲಸಿಕೆಯೊಂದೇ ರಾಮಬಾಣ

*2020ರ ಅಂತ್ಯಕ್ಕೆ ಜಗತ್ತಿನ ವಿವಿಧ ಭಾಗಗಳಲ್ಲಿ ಸುಮಾರು 40 ವಿಭಿನ್ನ ಕಂಪನಿಗಳ ಲಸಿಕೆಗಳು ಮಾನವ ಪ್ರಯೋಗಗಳಲ್ಲಿ ತೊಡಗಿವೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಸುಮಾರು 150ಕ್ಕೂ ಹೆಚ್ಚು ಲಸಿಕೆಗಳ ಪೂರ್ವಭಾವಿ ಪ್ರಯೋಗಗಳು ನಡೆಯುತ್ತಿವೆ.*





- **ಡಾ. ದರ್ಶನ್ ಈಶ್ವರ್**, ಐಸಿಯು ಸ್ಪೆಷಲಿಸ್ಟ್
ಬರ್ಟ್ಸ್ ಹೆಲ್ತ್ ಎನ್‌ಹೆಚ್‌ಎಸ್ ಟ್ರಸ್ಟ್, ಲಂಡನ್
ಇಂಗ್ಲೆಂಡ್., +44 7423027697
darshan.eshwar@gmail.com

2019ರ ಕೊನೆಯಲ್ಲಿ ಜಗತ್ತನ್ನೇ ತಲ್ಲಣಗೊಳಿಸಿದ ಕೋವಿಡ್-19 ಮಹಾಮಾರಿಗೆ ಬಲಿಯಾದವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಲಸಿಕೆಯೊಂದೇ ಇದನ್ನು ತಡೆಗಟ್ಟಲು ಇರುವ ರಾಮಬಾಣವೆಂದು ವಿಜ್ಞಾನಿಗಳು ಹಾಗೂ ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

2020ರ ಅಂತ್ಯಕ್ಕೆ ಜಗತ್ತಿನ ವಿವಿಧ ಭಾಗಗಳಲ್ಲಿ ಸುಮಾರು 40 ವಿಭಿನ್ನ ಕಂಪನಿಗಳ ಲಸಿಕೆಗಳು ಮಾನವ ಪ್ರಯೋಗಗಳಲ್ಲಿ ತೊಡಗಿವೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಸುಮಾರು 150ಕ್ಕೂ ಹೆಚ್ಚು ಲಸಿಕೆಗಳ ಪೂರ್ವಭಾವಿ ಪ್ರಯೋಗಗಳು (preclinical Trial) ನಡೆಯುತ್ತಿವೆ.

ಸಾಮಾನ್ಯವಾಗಿ ಒಂದು ಲಸಿಕೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮುಂಚೆ ಮೂರು ಹಂತದ ಕ್ಲಿನಿಕಲ್ ಪ್ರಯೋಗಗಳು ಮುಗಿದಿರುತ್ತವೆ. ಈ ಹಂತಗಳು ಮುಗಿಯಲಿಕ್ಕೆ ಸುಮಾರು ವರ್ಷಗಳ ಪರಿಶ್ರಮದ ಅಗತ್ಯವಿರುತ್ತದೆ. ಆದರೆ ಸಮಯದ ಅಭಾವ ಹಾಗೂ ತುರ್ತು ಅವಶ್ಯಕತೆಯ ಸಲುವಾಗಿ ಕೋವಿಡ್ ಲಸಿಕೆಯನ್ನು ಕೆಲವೇ ತಿಂಗಳುಗಳಲ್ಲಿ ತಯಾರಿಸಲಾಗಿದೆ. ಅಮೆರಿಕಾ ದೇಶದ FDA (ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್) ಸುರಕ್ಷಾ ಮಾನದಂಡಗಳನ್ನು ಅನುಸರಿಸಿಯೇ ಸದ್ಯಕ್ಕೆ ಲಭ್ಯವಿರುವ ಲಸಿಕೆಗಳನ್ನು ತಯಾರಿಸಲಾಗಿದೆ.

ಭಾರತದಲ್ಲಿ ತುರ್ತು ಪರಿಸ್ಥಿತಿಯಲ್ಲಿ ಉಪಯೋಗಿಸಲು ಅನುಮತಿ ನೀಡಲಾಗಿದೆ.

18 ವರ್ಷ ಮೇಲ್ಪಟ್ಟವರಿಗೆ ಮಾತ್ರ ಇಂಟ್ರಾಮಸ್ಕುಲರ್ ಇಂಜೆಕ್ಷನ್ ಮೂಲಕ ಕೊಡಲಾಗುವುದು. ಈ ಲಸಿಕೆಗೆ ಮುಂಚೆ ಅಲರ್ಜಿ ಆಗಿದ್ದಲ್ಲಿ, ಈ ಲಸಿಕೆಯ ಯಾವುದಾದರೂ ಪದಾರ್ಥಗಳಿಗೆ ಅಲರ್ಜಿ ಇದ್ದಲ್ಲಿ ಈ ಲಸಿಕೆಯನ್ನು ತೆಗೆದುಕೊಳ್ಳಬಾರದು.

**ಲಸಿಕೆಯಿಂದ ಅಡ್ಡ ಪರಿಣಾಮಗಳು:**

ಇಂಜೆಕ್ಷನ್ ಜಾಗದಲ್ಲಿ ನೋವು, ಕಡಿತ, ಊತ, ಬಿಸಿಯಾಗುವುದು, ಕೆಂಪಾಗುವುದು, ಆಯಾಸ, ಮೈ ಕೈ ನೋವು, ಜ್ವರ, ಚಳಿ, ವಾಂತಿ/ವಾಕರಿಕೆ, ಫ್ಲೂ ತರಹದ ಲಕ್ಷಣಗಳು, ಅಪರೂಪವಾಗಿ ತಲೆತಿರುಗುವಿಕೆ, ಹೊಟ್ಟೆ ನೋವು, ಬೆವರುವುದು, ಮೈ ಕಡಿತ, ಲಿಂಪ್ ನೋಡ್ ಊತ ಇತ್ಯಾದಿ ಅಡ್ಡ ಪರಿಣಾಮಗಳು ಕಂಡಲ್ಲಿ ಹತ್ತಿರದ ಆಸ್ಪತ್ರೆಗೆ ಸಂಪರ್ಕಿಸಿ.

ಲಸಿಕೆ ಮುನ್ನ ಈ ಕೆಳಗಿನ ತೊಂದರೆ / ಲಕ್ಷಣಗಳು ಇದ್ದಲ್ಲಿ ನಿಮ್ಮ ವೈದ್ಯರಿಗೆ ತಿಳಿಸಿ.

ನಿಮಗೆ ತೀವ್ರರೂಪದ ಅಲರ್ಜಿ ತೊಂದರೆ, ಜ್ವರ, ಬ್ಲೀಡಿಂಗ್ ಡಿಸಾರ್ಡರ್‌ನಿಂದ ಬಳಲುತ್ತಿದ್ದರೆ, ಗರ್ಭಿಣಿ/ಸ್ತನಪಾನ ಮಾಡುತ್ತಿದ್ದಲ್ಲಿ, ಬೇರೆ ಯಾವುದಾದರೂ ಕೊವಿಡ್ ವ್ಯಾಕ್ಸಿನ್ ತೆಗೆದೊಂಡಿದ್ದರೆ ವೈದ್ಯರಿಗೆ ತಿಳಿಸುವುದು ಅವಶ್ಯವಾಗಿರುತ್ತದೆ.

**ಸದ್ಯಕ್ಕೆ ಲಭ್ಯವಿರುವ ಕೋವಿಡ್ ಲಸಿಕೆಗಳು :**

| | ಕೋವಿಶೀಲ್ಡ್ astrazeneca/oxford/ serum institution of india ChAD ox 1-5/A-ZD1222 | ಕೋವ್ಯಾಕ್ಸಿನ್ (Covaccine) Bharath Biotech (ಭಾರತ್ ಬಯೋಟೆಕ್) | ಫೈಜರ್ ವ್ಯಾಕ್ಸಿನ್ (pfizer biontech) ಕೋಮಿರ್ನಾಟಿ (Comirnaty) | ಮೊಡೆರ್ನ (moderna) |
|---|---|---|---|---|
| ಬಗೆ (Type) | ನಾನ್ ರೆಪ್ಲಿಕೇಟಿಂಗ್ ಆಡಿನೋ ವೈರಸ್ ವೆಕ್ಟಾರ್ | ನಿಷ್ಕ್ರಿಯಗೊಳಿಸಲಾದ ವೈರಾಣು | ಎಂ.ಆರ್.ಎನ್.ಎ. | MRNA in lipid nanoparticles |
| ಡೋಸ್ (Dose) | 2 ಡೋಸ್‌ಗಳು, 28 ದಿನದ ಅಂತರದಲ್ಲಿ | 2 ಡೋಸ್‌ಗಳು, 28 ದಿನದ ಅಂತರದಲ್ಲಿ | 2 ಡೋಸ್‌ಗಳು, 21 ದಿನದ ಅಂತರದಲ್ಲಿ | 2 ಡೋಸ್‌ಗಳು, 28 ದಿನದ ಅಂತರದಲ್ಲಿ |
| ಪರಿಮಾಣಕಾರಿತ್ವ (Efficacy) | 62-90% | ಮೂರನೇ ಹಂತದ ಪ್ರಯೋಗಗಳು ಮುಗಿದಿಲ್ಲ | 95% | 95% |
| ಸಂಗ್ರಹಣೆ | 2-8$^{0}$c | 2-8$^{0}$c | -70$^{0}$c | -20$^{0}$c |
| ದೇಶಗಳು (Countries Approved) | ಇಂಗ್ಲೆಂಡ್, ಭಾರತ, ಮೆಕ್ಸಿಕೋ | ಭಾರತ | ಅಮೆರಿಕಾ, ಯೂರೋಪ್, ಸೌದಿ ಅರೇಬಿಯಾ, UAE, ಕೆನಡಾ. | ಅಮೆರಿಕಾ, ಯೂರೋಪ್, |

# ವಿವೇಕಾನಂದರ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು

## ಎ.ಆರ್.ಜಿ. ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಶ್ರೀ ತ್ಯಾಗೀಶ್ವರಾನಂದಜೀ

ದಾವಣಗೆರೆ, ಜ.13- ನಗರದ ಎ.ಆರ್.ಜಿ ಕಲಾ ಮತ್ತು ವಾಣಿಜ್ಯ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ ಮತ್ತು ಯುವ ರೆಡ್ ಕ್ರಾಸ್ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ದೇಶಭಕ್ತಿ ಹಾಗೂ ಸಾಂಸ್ಕೃತಿಕ ಸಂಪನ್ನತೆಯಿಂದ ಆಚರಿಸಲಾಯಿತು.



ಕಾರ್ಯಕ್ರಮವನ್ನು ಉದ್ಘಾಟಿಸಿದ ನಗರದ ರಾಮಕೃಷ್ಣ ಮಠದ ಶ್ರೀ ತ್ಯಾಗೀಶ್ವರಾನಂದಜೀ ವಿಶೇಷ ಉಪನ್ಯಾಸ ನೀಡಿದರು. ಭಾರತ ಮಾತೆಯ ವಿದ್ಯಾರ್ಥಿಗಳು ದೇಶದ ಸದೃಢತೆ ಹಾಗೂ ಆಧುನಿಕ ಅಭಿವೃದ್ಧಿಗಾಗಿ ಸ್ವಾಮಿ ವಿವೇಕಾನಂದರವರ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಕರೆ ಕೊಟ್ಟರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ತಮ್ಮ ಹಾಗೂ ದೇಶದ ಅಭಿವೃದ್ಧಿಗಾಗಿ ವೈಯಕ್ತಿಕ ಆರೋಗ್ಯ, ಪರಿಸರ ಕಾಳಜಿ, ರಾಷ್ಟ್ರೀಯ ಸಾಮಾಜಿಕ ಮತ್ತು ಆರ್ಥಿಕ ಸ್ವಚ್ಛತೆ, ಅಧ್ಯಾತ್ಮಿಕ ಮನೋಭಾವನೆ, ಪ್ರಾಚೀನ ಮಾನವೀಯ ಮೌಲ್ಯಗಳು ಹಾಗೂ ಶೈಕ್ಷಣಿಕ ಸಕಾರಾತ್ಮಕ ಚಿಂತನೆ ಅಳವಡಿಸಿಕೊಂಡು ಭಾರತವನ್ನು ವಿಶ್ವ ಗುರುವಾಗಿಸುವಲ್ಲಿ ಶ್ರಮಿಸಬೇಕೆಂದರು.

ದೇಶದ ದಾರಿದ್ರ್ಯ ನಿರ್ಮೂಲನೆಗೆ ಭ್ರಷ್ಟಾಚಾರ ಮುಕ್ತ ಹಾಗೂ ಶ್ರಮ ಸಂಸ್ಕೃತಿಯ ಜೀವನ ಇಂದು ಅಗತ್ಯವಾಗಿದೆ ಎಂದರು.


ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಪ್ರೊ ಕೆ.ಎಸ್.ಬಸವರಾಜಪ್ಪ ವಹಿಸಿದ್ದರು. ಪ್ರೊ. ಮಲ್ಲಿಕಾರ್ಜುನ್ ಆರ್. ಹಲಸಂಗಿ ಪ್ರಾಸ್ತಾವಿಕ ನುಡಿಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ.ಬೊಮ್ಮಣ್ಣ, ಆಂತರಿಕ ಭರವಸೆ ಕೋಶದ ಪ್ರೊ. ಜೆ. ಅನಿತಾ ಕುಮಾರಿ, ಸ್ನಾತಕೋತ್ತರ ವಿಭಾಗದ ಪ್ರೊ. ಲೋಕೇಶ್ ರೆಡ್ಡಿ ಉಪಸ್ಥಿತರಿದ್ದರು. ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿ ಪ್ರೊ. ಜೆ.ಕೆ.ಮಲ್ಲಿಕಾರ್ಜುನಪ್ಪ ಕಾಯಕವನ್ನು ಆಯೋಜಿಸಿದ್ದರು.

## ಹರಿಹರಕ್ಕೆ ಇಂದು ಸಚಿವ ಸೋಮಣ್ಣ


ವಸತಿ ಖಾತೆ ಸಚಿವ ವಿ. ಸೋಮಣ್ಣ ಅವರು ಹರಿಹರ ತಾಲ್ಲೂಕಿನಲ್ಲಿ ಇಂದು ಪ್ರವಾಸ ಕೈಗೊಳ್ಳಲಿದ್ದಾರೆ. ಬೆಳಿಗ್ಗೆ 10.30 ಕ್ಕೆ ಹರಿಹರಕ್ಕೆ ಆಗಮಿಸುವ ಅವರು, ಸಾರ್ವಜನಿರ ಭೇಟಿ ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸು ವರು. ನಂತರ ಬಿಜೆಪಿ ತಾಲ್ಲೂಕು ಕಚೇರಿಗೆ ಭೇಟಿ ನೀಡುವರು. ಬೆಳಿಗ್ಗೆ 11.30 ಕ್ಕೆ ವೀರಶೈವ ಲಿಂಗಾ ಯತ ಪಂಚ ಮಸಾಲಿ ಜಗದ್ಗುರು ಪೀಠದಲ್ಲಿ ಆಯೋಜಿಸಲಾಗಿರುವ 'ಹರ ಜಾತ್ರೆಯಲ್ಲಿ ಪಾಲ್ಗೊಳ್ಳು ವರು. ಮಧ್ಯಾಹ್ನ 12.30 ಕ್ಕೆ ಹರಿಹರ ದಿಂದ ನಿರ್ಗಮಿಸುವರು ಎಂದು ಸಚಿವರ ವಿಶೇಷ ಕರ್ತವ್ಯಾಧಿಕಾರಿ ಟಿ.ಎನ್.ರವಿಪ್ರಕಾಶ್ ತಿಳಿಸಿದ್ದಾರೆ.

## ಸಂಕ್ರಾಂತಿ ಸಂಭ್ರಮ



ಸಾಹಿತಿ ಮಹಾಂತೇಶ್ ಬಿ.ನಿಟ್ಟೂರು ಅವರು ಸಂಕ್ರಾಂತಿಯ ಹಿನ್ನೆಲೆ, ಮಹತ್ವ, ಆಚರಣೆಯ ವಿಧಿ ವಿಧಾನ, ಪ್ರಾಕೃತಿಕ ಬದಲಾವಣೆ ಇತ್ಯಾದಿ ಕುರಿತು ಸ್ವಾರಸ್ಯಕರವಾಗಿ ವಿವರಿಸಿರುವ ಹಾಗೂ ಐರಣಿ ಚಂದ್ರು ಅವರು ವಿವಿಧ ಗೀತೆಗಳನ್ನು ಪ್ರಸ್ತುತ ಪಡಿಸಿರುವ ಕಾವ್ಯಧಾರೆಯ ವಿಶೇಷ ಸಂಚಿಕೆ 'ಸಂಕ್ರಾಂತಿ ಸಂಭ್ರಮ'ವು ದಾವಣಗೆರೆ V1 ವಾಹಿನಿಯಲ್ಲಿ (SET TOP BOX NO - 102 ) ಇಂದು ಬೆಳಗ್ಗೆ 10.30 ಹಾಗೂ ಸಂಜೆ 6 ಗಂಟೆಗೆ ಪ್ರಸಾರವಾಗಲಿದೆ.

## ನಗರದ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಮಹಾಲಕ್ಷ್ಮಿ ಹೋಮ



ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ ದಲ್ಲಿ ನಡೆಯುತ್ತಿರುವ ಧನುರ್ಮಾಸ ಪೂಜೆಯ ಸಮಾಪ್ತಿ ಕಾರ್ಯಕ್ರಮವು ಶ್ರೀ ಮಹಾವಿಷ್ಣು, ಶ್ರೀ ಮಹಾಲಕ್ಷ್ಮಿ ಹೋಮದೊಂದಿಗೆ ಇಂದು ನಡೆಯಲಿದೆ ಎಂದು ದೇವಸ್ಥಾನದ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ಕ್ರಿಕೆಟ್ ಪಂದ್ಯಾವಳಿಗಳು

ಮಯೂರ ಕ್ರಿಕೆಟ್ ಕ್ಲಬ್ ಇವರ ಆಶ್ರಯದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಆಹ್ವಾನಿತ ಅಂತರ್ ಜಿಲ್ಲಾ ಮಟ್ಟದ ಅಂಡರ್ 16 ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಗಳು 'ದಾವಣಗೆರೆ ಕಪ್' ಇಂದಿನಿಂದ 6 ದಿನಗಳ ಕಾಲ ನಡೆಯಲಿವೆ. ಪಂದ್ಯಾವಳಿಗಳು ಎಂ.ಬಿ.ಎ. ಕಾಲೇಜ್ ಟರ್ಫ್ ಮೈದಾನ ಹಾಗೂ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿವೆ.

ಪಂದ್ಯಾವಳಿಗಳ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದ್ದು, ದಿನೇಶ್ ಕೆ. ಶೆಟ್ಟಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕೆ. ಶಶಿಧರ್, ಮೋಹನ್‌ರಾವ್, ಶ್ರೀನಿವಾಸ್, ಎಲ್.ಎಂ. ಪ್ರಕಾಶ್, ಹುಚ್ಚವ್ವನಹಳ್ಳಿ ಮಂಜುನಾಥ್, ಅಶೋಕ, ಗೋಪಾಲ ಕೃಷ್ಣ, ತಿಮ್ಮೇಶ್, ಅನಿಲ್ ಆಗಮಿಸುವರು.

## ಹೊನ್ನಾಳಿ, ಚನ್ನಗಿರಿ ತಾಲ್ಲೂಕಿನಲ್ಲಿ ಇಂದು ರಾಜನಹಳ್ಳಿ ಶ್ರೀಗಳ ಪ್ರವಾಸ

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಫೆಬ್ರವರಿ 8 ಮತ್ತು 9 ರಂದು ಹಮ್ಮಿಕೊಂಡಿರವ 3ನೇ ವರ್ಷದ ವಾಲ್ಮೀಕಿ ಜಾತ್ರೆಯ ಅಂಗವಾಗಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಇಂದು ಹೊನ್ನಾಳಿ, ನ್ಯಾಮತಿ ಮತ್ತು ಚನ್ನಗಿರಿ ತಾಲ್ಲೂಕಿನಲ್ಲಿ ಪೂರ್ವಭಾವಿ ಸಭೆಗಳನ್ನು ನಡೆಸಲಿದ್ದಾರೆ ಎಂದು ಜಾತ್ರೆಯ ಸಂಚಾಲಕ ಹೊದಿಗೆರೆ ರಮೇಶ್ ತಿಳಿಸಿದ್ದಾರೆ.

## ವಿಶೇಷ ವಿವಾಹಕ್ಕೆ ನೋಟಿಸ್ ಕಡ್ಡಾಯವಲ್ಲ : ಹೈಕೋರ್ಟ್

ಲಖ್ನೌ, ಜ. 13 – ವಿಶೇಷ ವಿವಾಹ ಕಾಯ್ದೆಯಡಿ ಮದುವೆ ಯಾಗುವಾಗ 30 ದಿನಗಳ ನೋಟಿಸ್ ನೀಡುವುದು ಆಯ್ಕೆಗೆ ಬಿಟ್ಟ ವಿಷಯ ಎಂದು ಅಲಹಾಬಾದ್ ಉಚ್ಚ ನ್ಯಾಯಾಲಯದ ಲಖ್ನೌ ಪೀಠ ತಿಳಿಸಿದೆ. ನೋಟಿಸ್ ಕಡ್ಡಾಯಗೊಳಿ ಸುವುದು ಖಾಸಗಿ ನದ ಉಲ್ಲಂಘನೆ ಎಂದು ನ್ಯಾಯಾಲಯ ತಿಳಿಸಿದೆ. ಸರ್ಕಾರ ಹಾಗೂ ಸರ್ಕಾರೇತರರ ಮಧ್ಯ ಪ್ರವೇಶ ಇಲ್ಲದೇ ಮದುವೆಗೆ ಸಂಗಾತಿ ಆಯ್ಕೆ ಮಾಡಿಕೊಳ್ಳುವ ಹಕ್ಕಿಗೆ ಈ ನಿಯಮ ಅಡ್ಡಿಪಡಿಸುತ್ತದೆ ಎಂದು ನ್ಯಾಯಾಲಯ ತೀರ್ಪಿನಲ್ಲಿ ತಿಳಿಸಿದೆ. ತಮ್ಮ ಮದುವೆಯ ಕೋರಿತ ನೋಟಿಸ್ ಅನ್ನು ಪ್ರಕಟಿಸುವ ಇಲ್ಲವೇ ಪ್ರಕಟಿಸದೇ ಇರುವ ಬಗ್ಗೆ ಸಂಬಂಧಿಸಿದವರು ಲಿಖಿತವಾಗಿ ಮನವಿ ಸಲ್ಲಿಸಬಹುದು. ಒಂದು ವೇಳೆ ಜೋಡಿ ನೋಟಿಸ್ ಬಹಿರಂಗ ಪಡಿಸಬಾರದು ಎಂದರೆ, 30 ದಿನಗಳ ನಂತರ ಮದುವೆ ಅಂತಿಮಗೊಳಿಸಬೇಕು ಎಂದು ನ್ಯಾಯಾಲಯ ಹೇಳಿದೆ.

SCIENCE ACADEMY (R.)
(A UNIQUE CENTRE FOR P.U. CLASSES)
# 307/2B, 1st FLOOR, 2ND MAIN, P.J. EXTN, NEAR STADIUM, DAVANGERE – 4
ADMISSION STARTED FOR
II PUC SCIENCE
PCMB TUTIONS
Classes starts from 20th January 2021
For more Details contact: Office: 08192 – 257546,
Mobile: 9980368779, 9448178087.
"We don't have any other branches in Davangere in the name of Academy"

6 ದಿನ ಸುಂದರ ಸ್ವರ್ಗಕ್ಕೆ ಸ್ವಾಗತ
ನೇಪಾಳ
ಹೊರಡುವ ದಿನಾಂಕ: 29 ಜನವರಿ
₹. 47000/-
ಕಠಮಂಡು ಹಾಗೂ ಪೋಖರ
ಭಾರತೀಯ ಊಟ, 3★ವಸತಿ, ವಿಮಾನ ಪ್ರಯಾಣ, ಪ್ರವೇಶ ಶುಲ್ಕ ಎಲ್ಲಸೇರಿದೆ
ದೂ: 9449984859 9448073129
nepal MOTHI International HOLIDAYS DAVANAGERE

ಹೊಸ ವರುಷ ಹಾಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳು 2021
ಸರ್ವರಿಗೂ ಸಮಪಾಲು
ಸರ್ವರಿಗೂ ಸಮಬಾಳು
ಇದು ಸಹಕಾರ ತತ್ವದ ತಿರುಳು
ಅರಿತು ಬಾಳೋಣ ಈ ತತ್ವದೊಳು
ಸಹಕಾರ ವೃದ್ಧಿಸಲಿ
ಹೊಸ ವರುಷದೊಳು....
ಸಹಕಾರದಿಂದ ಸಮೃದ್ಧಿಯೆಡೆಗೆ.......
ಬಿ.ವಿ. ಚಂದ್ರಶೇಖರ್
ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತರು
ಅಧ್ಯಕ್ಷರು : ಜನತಾ ಬಜಾರ್, ದಾವಣಗೆರೆ. ದಾವಣಗೆರೆ ಮರ್ಚಂಟ್ಸ್ ಕ್ಲಬ್
ನಿರ್ದೇಶಕರು : ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ. ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ನಿ., ದಾವಣಗೆರೆ
ಮಾಜಿ ನಿರ್ದೇಶಕರು : ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು.



ಸಂಕ್ರಾಂತಿ ಶುಭಾಶಯಗಳು
ನಮ್ಮೆಲ್ಲಾ ಆತ್ಮೀಯ ಬಂಧು - ಮಿತ್ರರಿಗೂ, ಸರ್ವ ನಾಗರಿಕರಿಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.
ಡಿ. ಕೆ. ಸಂಗಮೇಶ್ ಎಲಿಗಾರ್
ಪತ್ರ ಬರಹಗಾರರು, ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ, ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710



ಸಂಕ್ರಾಂತಿ ಶುಭಾಶಯಗಳು
ನಮ್ಮೆಲ್ಲಾ ಆತ್ಮೀಯ ಸ್ನೇಹಿತರಿಗೂ, ಬಂಧುಗಳಿಗೂ ಹಾಗೂ ನಗರದ ಸರ್ವ ನಾಗರಿಕರಿಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.
ಪವಾಡಪ್ಪ ತಿಪ್ಪೇಸ್ವಾಮಿ ದಸ್ತಾವೇಜು ಬರಹಗಾರರು, ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ, ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765





ಹರಜಾತ್ರಾ ಮಹೋತ್ಸವ 2021
ಸ್ವಾವಲಂಬಿ ಸಮಾವೇಶ * ಭೂತಪ್ಪನ ಸಮಾವೇಶ * ಯುವರತ್ನ ಸಮಾವೇಶ
ಹರದ್ವಾರ ಉದ್ಘಾಟನೆ
ಯೋಗಸಿಂಹಾಸನಾಧೀಶ್ವರ ಪಂಚಮಸಾಲಿ ಜಗದ್ಗುರು
ಶ್ರೀ ಶ್ರೀ ಶ್ರೀ ವಚನಾನಂದ ಮಹಾಸ್ವಾಮಿಗಳವರ
ತೃತೀಯ ಪೀಠಾರೋಹಣ
ದಿನಾಂಕ 14, 15 ಜನವರಿ 2021.
ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ, ಸುಕ್ಷೇತ್ರ ಹರಿಹರ.
ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಸರ್ವ ಭಕ್ತಾದಿಗಳಿಗೂ
ಹೃತ್ಪೂರ್ವಕ ಸ್ವಾಗತ... ಸುಸ್ವಾಗತ....
✦ ಬಾದಾಮಿ ಬಸವರಾಜಪ್ಪ ಮತ್ತು ಮಕ್ಕಳು, ಜಮೀನ್ದಾರರು, ಭಾನುವಳ್ಳಿ, ಹರಿಹರ ತಾಲ್ಲೂಕು.
✦ ಬಾದಾಮಿ ಹಾರ್ಡ್‌ವೇರ್ಸ್ ಅಂಡ್ ಪ್ಲೈವುಡ್ಸ್
✦ ಬಾದಾಮಿ ಫ್ಯಾಶನ್ಸ್, ನರಸರಾಜ ರಸ್ತೆ, ದಾವಣಗೆರೆ.
✦ ಕುರುವತ್ತಿ ಬಸವೇಶ್ವರ ವಾಷಿಂಗ್ ಯೂನಿಟ್, ಕರೂರು ಇಂಡಸ್ಟ್ರೀಯಲ್ ಏರಿಯಾ, ಡಿ.ಸಿ. ಆಫೀಸ್ ಹತ್ತಿರ, ದಾವಣಗೆರೆ.
✦ ಸಾಯಿ ಕ್ರಿಯೇಷನ್ಸ್, ನಿಟುವಳ್ಳಿ, ದಾವಣಗೆರೆ.
✦ ಸಾಯಿ ಗಾರ್ಮೆಂಟ್ಸ್, ಭಾನುವಳ್ಳಿ, ಹರಿಹರ ತಾಲ್ಲೂಕು.



ಬಾದಾಮಿ ಜಯಣ್ಣ
ಅಧ್ಯಕ್ಷರು, ಪಂಚಮಸಾಲಿ ಸಮಾಜ ನಗರ ಯುವ ಘಟಕ, ದಾವಣಗೆರೆ. ಖಜಾಂಚಿ, ಜಿಲ್ಲಾ ಯೋಗ ಒಕ್ಕೂಟ ನಿರ್ದೇಶಕರು, ದಾವಣಗೆರೆ ಜಿಲ್ಲಾ ಟೆಕ್ಸ್‌ಟೈಲ್ಸ್ ಪಾರ್ಕ್ ನಿರ್ದೇಶಕರು, ಹರ ಸೇವಾ ಸಂಸ್ಥೆ, ದಾವಣಗೆರೆ.

ಅಭಿನಂದನೆಗಳು



ಕರ್ನಾಟಕ ರಾಜ್ಯ ಅಕ್ಕಿ ಗಿರಣಿ ಮಾಲೀಕರ ಸಂಘದ ಉಪಾಧ್ಯಕ್ಷರು ಹಾಗೂ ದಾವಣಗೆರೆ ಜಿಲ್ಲೆಯ ಅಕ್ಕಿ ಗಿರಣಿ ಮಾಲೀಕರ ಸಂಘದ ಕಾರ್ಯದರ್ಶಿಗಳಾದ
ಶ್ರೀ ಕೋಗುಂಡಿ ಬಕ್ಕೇಶಪ್ಪನವರು
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟ ಬೆಂಗಳೂರು.
ಇದರ ಆಡಳಿತ ಮಂಡಳಿಯ ನಿರ್ದೇಶಕರಾಗಿ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಪ್ರತಿನಿಧಿಗಳಾಗಿ ಎರಡನೇ ಬಾರಿ ಅವಿರೋಧವಾಗಿ ಆಯ್ಕೆಯಾಗಿರುವ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.
♦ ಶ್ರೀ ವೀರ ಹನುಮಾನ್ ರೈಸ್ ಮಿಲ್
♦ ಶ್ರೀ ಶಿವ ರೈಸ್‌ಟೆಕ್, ♦ ಶ್ರೀ ನಂದಿ ಇಂಡಸ್ಟ್ರೀಸ್
♦ ಶ್ರೀ ಬಸವರಾಜ ರೈಸ್ ಇಂಡಸ್ಟ್ರೀಸ್
♦ ಶ್ರೀ ಬಸವರಾಜ ರೈಸ್ ಟೆಕ್ ♦ ಶ್ರೀ ಶಾರದ ರೈಸ್ ಮಿಲ್
♦ ಎನ್.ಎಮ್. ಕಡೇಕೊಪ್ಪ ರೈಸ್ ಮಿಲ್

ಹುಟ್ಟುಹಬ್ಬದ ಶುಭಾಶಯಗಳು
ಇಂದು ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ವಕೀಲರು ಹಾಗೂ ನಮ್ಮೆಲ್ಲರ ಆತ್ಮೀಯರಾದ
ಶ್ರೀಮತಿ ಆರ್.ಭಾಗ್ಯಲಕ್ಷ್ಮಿಯವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು.




ಶುಭ ಕೋರುವವರು
♦ ಎಸ್.ವಿ ಉಜ್ಜನಪ್ಪ ಮತ್ತು ಮಕ್ಕಳಾದ ತೇಜಸ್, ಶ್ರೇಯಸ್ (ಸೊನಾಲಿಕ ಟ್ರ್ಯಾಕ್ಟರ್ ಡೀಲರ್, ಚಿತ್ರದುರ್ಗ)
♦ ಶ್ರೀಮತಿ ಹೇಮಲತಾ ಶ್ರೀ ಲೋಕಿಕೆರೆ ಟಿ.ಹೆಚ್. ಸಿದ್ದಪ್ಪ, ಹಿರಿಯ ವಕೀಲರು, ದಾವಣಗೆರೆ.
♦ ಶ್ರೀಮತಿ ಫರೀದಾ ಬಾನು ಶ್ರೀ ಈ. ಫಯಾಜ್ ಹಿರಿಯ ವಕೀಲರು, ದಾವಣಗೆರೆ.
♦ ಶ್ರೀಮತಿ ಶ್ರೀದೇವಿ ಶ್ರೀ ಸಂತೋಷ್ ಎಂ. ಮತ್ತು ಚಿ|| ಶ್ರೀಷಾನ್, ಚಿ|| ಸಾಮ್ರಾಟ್
ಸ್ನೇಹಿತರಾದ
♦ ಶ್ರೀಮತಿ ಸಬ್ರೀನ್ ತಾಜ್ ವಕೀಲರು, ದಾವಣಗೆರೆ.
♦ ಕು. ರೋಹಿಣಿ ವಕೀಲರು, ದಾವಣಗೆರೆ.
♦ ವಕೀಲರ ವೃಂದ ಹಾಗೂ ಬಂಧು-ಮಿತ್ರರು.

# 40 ವಿಧಾನಸಭಾ ಕ್ಷೇತ್ರಗಳಲ್ಲಿ ಮರಾಠಿಗರೇ ನಿರ್ಣಾಯಕರು

## ರಾಣೇಬೆನ್ನೂರಿನಲ್ಲಿನ ಬಿಜೆಪಿ ಕಾರ್ಯಕ್ರಮದಲ್ಲಿ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್

ರಾಣೇಬೆನ್ನೂರು, ಜ.13- ರಾಜ್ಯದಲ್ಲಿ ನಲವತ್ತು ಲಕ್ಷ ಜನಸಂಖ್ಯೆ ಹೊಂದಿರುವ ಮರಾಠರು ರಾಜ್ಯದ ನಲವತ್ತು ಕ್ಷೇತ್ರಗಳಲ್ಲಿ ನಿರ್ಣಾಯಕ ಮತದಾರರಾಗಿದ್ದು, ಅಲ್ಪಸಂಖ್ಯಾತರಾದ ನಾವು, ಅಸಂಘಟಿತರಾಗಿರುವುದರಿಂದ ಎಲ್ಲೆಡೆ ವಂಚಿತರಾಗಿದ್ದೇವೆ ಎಂದು ದಾವಣಗೆರೆ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತ ರಾವ್ ಜಾಧವ್ ತಿಳಿಸಿದ್ದಾರೆ.

ಇಲ್ಲಿನ ತುಕ್ಕಾಭವಾನಿ ಸಭಾಭವನದಲ್ಲಿ ಇಂದು ಏರ್ಪಾಡಾಗಿದ್ದ ರಾಣೇಬೆನ್ನೂರು ತಾಲ್ಲೂಕಿನ ಗ್ರಾ.ಪಂ. ಚುನಾವಣೆಯಲ್ಲಿ ಆಯ್ಕೆಯಾದ ಮರಾಠ ಸಮಾಜದ 20 ಸದಸ್ಯರನ್ನು ಸನ್ಮಾನಿಸಿ, ಅವರು ಮಾತನಾಡಿದರು.

ಬೆಳಗಾವಿಯ ಕೆಲವರು ವಿರೋಧ ಮಾಡಿದಾಕ್ಷಣ ನಾವು ಮರಾಠಿಗರಾಗಲ್ಲ. ನಾವು, ನಮ್ಮ ಅಜ್ಜ ಮುತ್ತಜ್ಜರೆಲ್ಲ ಇಲ್ಲಿಯೇ ಹುಟ್ಟಿದವರು. ಇಲ್ಲಿಯೇ ಸಾಯುವವರು. ನಾವೆಲ್ಲ ಕನ್ನಡಿಗರೇ. ಪ್ರಾಧಿಕಾರವನ್ನು ವಿರೋಧಿಸುವವರ ವಿರುದ್ಧ ಗಟ್ಟಿ ಧ್ವನಿ ಎತ್ತಬೇಕು. ನಾವು ಸಂಘಟಿತರಾಗಲು ಈಗ ಒಳ್ಳೆಯ ಕಾಲ ಬಂದಿದೆ. ಆ ಮೂಲಕ ಮೀಸಲಾತಿ ಪಡೆಯಬೇಕು ಎಂದು ಜಾಧವ್ ಹೇಳಿದರು.

ನೀವು ಯಾವ ಪಕ್ಷದವರಾದರೂ ಸಹ ಅಲ್ಲಿ ನಿಮ್ಮ ಶಕ್ತಿ ಬೆಳೆಸಿಕೊಳ್ಳಿ. ನಿಮಗೆ ಜನತೆ ಈಗ ಕೊಟ್ಟಿರುವ ಅಧಿಕಾರವನ್ನು ಸದುಪಯೋಗ ಪಡಿಸಿಕೊಳ್ಳಿ. ನಿಮ್ಮ ಕ್ಷೇತ್ರದ ಅಭಿವೃದ್ಧಿಯ ಜೊತೆಗೆ ಮುಖಂಡತ್ವ ಬೆಳೆಸಿಕೊಂಡು ಸಮಾಜ ಸಂಘಟನೆ ಮಾಡಿರಿ ಎಂದು ಯಶವಂತರಾವ್ ಸನ್ಮಾನಿತರಿಗೆ ಕಿವಿಮಾತು ಹೇಳಿದರು.

ವೇದಿಕೆಯಲ್ಲಿ ಮಹಿಳಾ ಅಧ್ಯಕ್ಷೆ ನಾಗವೇಣಿ ಪವಾರ್, ನಿವೃತ್ತ ಡಿವೈಎಸ್‌ಪಿ, ಎಂ.ಎಸ್. ಜಾಧವ್, ಪವಿತ್ರ ನಾಗೇನಹಳ್ಳಿ ಇನ್ನಿತರರಿದ್ದರು. ಪ್ರಾಸ್ತಾವಿಕವಾಗಿ ಶಿವಮೂರ್ತಿ ದಿಲ್ಲಿವಾಲಾ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಬಿ.ಕೆ. ರಾಜನಹಳ್ಳಿ ಸ್ವಾಗತಿಸಿದರು. ವಿಷ್ಣು ಗಾವಡೆ ವಂದಿಸಿದರು.



### ಸಾವಿರ ಕೋಟಿ ಸರದಾರ ಎಸ್ಸೆಸ್...

ನಾಲ್ಕು ಶುಗರ್ ಫ್ಯಾಕ್ಟರಿ, ಡೆಂಟಲ್ ಕಾಲೇಜು, ಬಾಪೂಜಿ ಆಸ್ಪತ್ರೆ, ಕಲ್ಯಾಣ ಮಂಟಪಗಳು ಹೀಗೆ ಅರ್ಧ ದಾವಣಗೆರೆಯ ಧಣಿ, ಸಾವಿರ ಕೋಟಿಯ ಸರದಾರ ಶಾಮನೂರು ಶಿವಶಂಕರಪ್ಪ ಅವರ ಎದುರು ವಿಧಾನಸಭೆಗೆ ನಾಲ್ಕು ಬಾರಿ ಸ್ಪರ್ಧಿಸಿದ್ದೇನೆ. ಈ ಬಾರಿ ಕೇವಲ ನಾಲ್ಕು ಸಾವಿರ ಮತಗಳ ಅಂತರದಿಂದ ಸೋತಿದ್ದೇನೆ. ಇಲ್ಲಿ ನಮ್ಮ ಸಮಾಜದ ಜನಸಂಖ್ಯೆ ಕಡಿಮೆ ಇದೆ. ಇತರೆ ಸಮಾಜಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದರೆ ಯಶಸ್ಸು ಸಾಧ್ಯ ಎಂದು ಯಶವಂತರಾವ್ ತಮ್ಮ ರಾಜಕಾರಣ ಕುರಿತು ಮೆಲುಕು ಹಾಕಿದರು.



## ಬನ್ನಿಮಹಾಂಕಾಳಮ್ಮನ ದೇವಸ್ಥಾನದಲ್ಲಿ ಕಾರ್ತಿಕ

ದಾವಣಗೆರೆ, ಜ.13- ಮಹಾನಗರ ಪಾಲಿಕೆಯ 15ನೇ ವಾರ್ಡಿನ ಕುಂದುವಾಡ ರಸ್ತೆಯ ಜೈನ್ ಲೇಔಟ್ ನಲ್ಲಿರುವ ಶ್ರೀ ಬನ್ನಿ ಮಹಾಂಕಾಳಮ್ಮನ ದೇವಸ್ಥಾನದಲ್ಲಿ ಇಂದು ಏರ್ಪಾಡಾಗಿದ್ದ ಕಾರ್ತಿಕ ದೀಪೋತ್ಸವವನ್ನು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು.

ಪಾಲಿಕೆ ಮಾಜಿ ಸದಸ್ಯ ಶಿವನಳ್ಳಿ ರಮೇಶ್, 15ನೇ ವಾರ್ಡಿನ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್, ಪಾಲಿಕೆ ಸದಸ್ಯರಾದ ಶ್ರೀಮತಿ ಸವಿತಾ ಗಣೇಶ್, ಸುಧಾ ಮಂಜುನಾಥ್, ವಾರ್ಡಿನ ಮುಖಂಡರುಗಳಾದ ಗಾಳೆಯಪ್ಪ, ಉಮೇಶ್ ಲಾಯರ್ ಮಂಜಣ್ಣ, ವೀರಯ್ಯಸ್ವಾಮಿ, ರವಿ, ವಿನಾಯಕ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಹರಿಹರಕ್ಕೆ ಇಂದು ಕೃಷಿ ಸಚಿವ ಬಿ.ಸಿ. ಪಾಟೀಲ್

ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ಇಂದು ಹರಿಹರಕ್ಕೆ ಆಗಮಿಸಲಿದ್ದಾರೆ. ಮಧ್ಯಾಹ್ನ 3 ಕ್ಕೆ ಪಂಚಮಸಾಲಿ ಪೀಠದಲ್ಲಿನ ಹರ ಜಾತ್ರೆಯಲ್ಲಿ ನಡೆಯಲಿರುವ ಸ್ವಾವಲಂಬಿ ಸಮಾವೇಶ-ಸಂಕ್ರಾಂತಿ ಸಂಭ್ರಮದಲ್ಲಿ ಸಚಿವರು ಪಾಲ್ಗೊಳ್ಳುವರು. ಸಂಜೆ 5 ಗಂಟೆಗೆ ಹಿರೇಕೆರೂರಿಗೆ ಪ್ರಯಾಣ ಮಾಡುವರು.

## ಶ್ರೀಮತಿ ಸತ್ಯಭಾಮ ನಿಧನ



ದಾವಣಗೆರೆ ಎಪಿಎಂಸಿ ಯಾರ್ಡ್ ಪ್ರಸಾದ್ ಟ್ರೇಡರ್ಸ್ ಮಾಲೀಕರಾದ ಜೆ.ರವೀಂದ್ರಗುಪ್ತ ಹಾಗೂ ಕೆ.ಜೆ.ಪ್ರಸಾದ್ ಇವರ ಮಾತೃಶ್ರೀ

**ಶ್ರೀಮತಿ ಸತ್ಯಭಾಮ** (88 ವರ್ಷ)

(ಲೇ|| ಮೇಡಾ ಕೆ.ಜಿ.ಜನಾರ್ಧನ ಶೆಟ್ಟಿ ಅವರ ಧರ್ಮಪತ್ನಿ)

ಅವರು ದಿ: 13-1-2021ರ ಬುಧವಾರ ಸಂಜೆ 6.35ಕ್ಕೆ ಗಂಗಾವತಿಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ನಾಲ್ವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿ: 14-1-2021ರ ಗುರುವಾರ ಮಧ್ಯಾಹ್ನ 2.30ಕ್ಕೆ ಗಂಗಾವತಿಯ ಆರ್ಯವೈಶ್ಯ ಬೃಂದಾವನದಲ್ಲಿ ನೆರವೇರಲಿದೆ.

ದು:ಖತಪ್ತ ಕುಟುಂಬ ವರ್ಗ
ಮೇಡಾ ಫ್ಯಾಮಿಲಿ
7892273242, 9845145915












JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte